ಶೃಂಗೇರಿಯ ಜಗದ್ಗುರು ಸನ್ನಿಧಾನಂನ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳಿಂದ ಕಾಶ್ಮೀರದ ಗಡಿಯಲ್ಲಿ ಶಾರದಾಂಬ ಪ್ರಾಣ ಪ್ರತಿಷ್ಠೆ ಮತ್ತು ಕುಂಭಾಭಿಷೇಕದಂತಹ ಐತಿಹಾಸಿಕ ಕಾರ್ಯಕ್ರಮ ಸಂಪನ್ನಗೊಂಡಿದೆ. ಶೃಂಗೇರಿಯಿಂದಲೇ ತೆರಳಿದ್ದ ಋತ್ವಿಕ ಶ್ರೇಷ್ಠರು ಇಲ್ಲಿನ ಸಂಪ್ರದಾಯದಂತೆ ಶ್ರೀಚಕ್ರ ಪ್ರತಿಷ್ಠಾಪಿಸಿ, ಹೋಮ ಹವನ ನಡೆಸಿ ದೇವಸ್ಥಾನದ ಪ್ರತಿಷ್ಠಾಪನಾ ಕಾರ್ಯ ಪೂರ್ಣಗೊಳಿಸಿದ್ದಾರೆ. ಜಗದ್ಗುರು ಸನ್ನಿಧಾನಂ ಜೂನ್ 4ರಂದೇ ವಿಶೇಷ ವಿಮಾನದ ಮೂಲಕ ಶ್ರೀನಗರ ತಲುಪಿದ್ದಾರೆ. ಅಲ್ಲಿ ಅವರ ಮುಂದಿನ ಪ್ರಯಾಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಕಲ ಏರ್ಪಾಟನ್ನೂ ಮಾಡಿತು. ಪ್ರಯಾಣಿಸಲು ಬಾಂಬ್ ನಿರೋಧಕ ವಾಹನ, ಗಡಿ ಸಮೀಪ ತಲುಪಲು ಮಿಲಿಟರಿ ಹೆಲಿಕ್ಯಾಪ್ಟರ್, ಸೈನ್ಯದ ರಕ್ಷಣೆ ಮುಂತಾದ ಸಕಲ ಏರ್ಪಾಟುಗಳನ್ನೂ ಉಭಯ ಸರ್ಕಾರಗಳು ಕೈಗೊಂಡು ಜಗದ್ಗುರುಗಳ ವಿಜಯಯಾತ್ರೆಗೆ ಸಕಲ ಸಹಯೋಗ ನೀಡಿದೆ. ಶ್ರೀನಗರದಲ್ಲಿ ಉಪರಾಜ್ಯಪಾಲರು ಗುರು ದರ್ಶನ ಮಾಡಿ ಆಶೀರ್ವಾದ ಪಡೆದಿದ್ದಾರೆ. ದೇವಸ್ಥಾನ ಸನಿಹದ ಹೆಲಿಪ್ಯಾಡಿನಲ್ಲಿ ಇಳಿಯುತ್ತಿದ್ದಂತೆ ಜಗದ್ಗುರುಗಳನ್ನು ಅಲ್ಲಿನ ಜಿಲ್ಲಾಧಿಕಾರಿ ಪೂರ್ಣ ಕುಂಭ ಸ್ವಾಗತ ನೀಡಿ ಬರಮಾಡಿಕೊಂಡಿದ್ದಾರೆ.

ಪಾಕ್ ಗಡಿಗೆ ಹೊಂದಿಕೊಂಡಂತೆ ಇರುವ ಈ ದೇವಸ್ಥಾನಕ್ಕೆ ಅಂದು ಅತಿಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದರು. ಅಲ್ಲಿ ಹತ್ತು ಜನ ಸೇರುವುದೂ ಕಷ್ಟ. ಅಲ್ಲಿಗೆ ಬರಲು ಜಿಲ್ಲಾಡಳಿತ ಅನುಮತಿ ಪತ್ರ ಪಡೆಯಬೇಕು.ಹೀಗಿದ್ದೂ ಅಂದು ಸೇರಿದ್ದ ಭಕ್ತರ ಸಂಖ್ಯೆ ವಿಶೇಷ ಅನಿಸದಿರದು. ಗಡಿಯಲ್ಲಿ ಗಣಹೋಮ ಸೇರಿದಂತೆ ವಿವಿಧ ಹೋಮ ಹವನ ನಡೆದಿದ್ದು ಒಂದು ವಿಶೇಷ ಅಧ್ಯಾಯಕ್ಕೆ ನಾಂದಿ ಹಾಡಿದಂತಾಯಿತು. ಭರತವರ್ಷದ ಚರಿತ್ರೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಘಟನೆ ಇದು.

ಭಾನುವಾರ ಒಂದು ದಿನದ ವಾಸ್ತವ್ಯದ ನಂತರ ಮತ್ತೆ ಅದೇ ಸೈನ್ಯ ಹೆಲಿಕ್ಯಾಪ್ಟರ್ ಮೂಲಕ ಜಗದ್ಗುರುಗಳು ಶ್ರೀನಗರಕ್ಕೆ ಹಿಂತಿರುಗಿ ಅಲ್ಲೇ ವಾಸ್ತವ್ಯ ಮಾಡಿದರು. ಅಂದು ಶ್ರೀನಗರದಲ್ಲಿ ಚಂದ್ರಮೌಳೇಶ್ವರ ಪೂಜೆ ನೆರವೇರಿದೆ. ಸೋಮವಾರ ಬೆಳಿಗ್ಗೆ ಶ್ರೀನಗರದ ಶಂಕರಾಚಾರ್ಯ ಬೆಟ್ಟಕ್ಕೆ ತೆರಳಿದ ಜಗದ್ಗುರುಗಳು ಅಲ್ಲಿ ಶಿವಪೂಜೆ ನೆರವೇರಿಸಿದರು. ಮಹೇಶ್ವರನಿಗೆ 1008 ರುದ್ರಾಕ್ಷಿ ಮಾಲೆ, ಕಮಲ ಪುಷ್ಪ ಮತ್ತು ರಜತ ಬಿಲ್ವಪತ್ರೆ ಸಮರ್ಪಿಸಿ ಜಗದ್ಗುರುಗಳಿಂದ ವಿಶೇಷ ಪೂಜೆ ಸಂದಿದೆ. ದೇವತಾ ಕಾರ್ಯ ಯಶಸ್ವಿಯಾಗಿ ಮುಗಿಸಿದ ನಂತರ ಜಗದ್ಗುರುಗಳು ವಿಶೇಷ ವಿಮಾನದ ಮೂಲಕ ಮಂಗಳೂರಿಗೆ ಬಂದು ಅಲ್ಲಿಂದ ಶೃಂಗೇರಿಯತ್ತ ಪ್ರಯಾಣಿಸಿದರು.



ಶಂಕರಾಚಾರ್ಯರು ಕಾಶ್ಮೀರದಿಂದ ಜಗನ್ಮಾತೆ ಶಾರದೆಯನ್ನು ಶೃಂಗೇರಿಗೆ ತಂದು ಶ್ರೀಚಕ್ರ ಪ್ರತಿಷ್ಠಾಪಿಸಿ ಶಾರದೆಯನ್ನು ಇಲ್ಲಿ ನೆಲೆಗೊಳಿಸಿದಂತೆ, ಸಹಸ್ರಾರು ವರ್ಷಗಳ ನಂತರ ಶೃಂಗೇರಿಯ ಶಂಕರಾಚಾರ್ಯರು ಶೃಂಗೇರಿಯಿಂದಲೇ ಅಮ್ಮನವರನ್ನು ಕಾಶ್ಮೀರಕ್ಕೂ ಕರೆತಂದು ಶ್ರೀಚಕ್ರ ಪ್ರತಿಷ್ಠಾಪಿಸಿ ಕಾಶ್ಮೀರದಲ್ಲೆ ಜಗನ್ಮಾತೆಯನ್ನು ನೆಲೆಗೊಳಿಸಿದ್ದು ಸನಾತನ ಧರ್ಮದ ಇತಿಹಾಸದಲ್ಲೇ ಪವಿತ್ರ ಘಟನೆ. ಜಗದ್ಗುರು ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಗಳು ಆಗಲೇ ಶಂಕರ ಸ್ಥಾಪಿತ ಬದರಿ ಮತ್ತು ದ್ವಾರಕಾ ಪೀಠದ ಜಗದ್ಗುರುಗಳ ಪಟ್ಟಾಭಿಷೇಕ ಮಹೋತ್ಸವ ನಡೆಸಿಕೊಟ್ಟಿದ್ದರು. ಈಗ ಆದಿ ಶಂಕರಾಚಾರ್ಯರಂತೆ ಕಾಶ್ಮೀರದಲ್ಲಿ ಭಾರತದ ಉತ್ತರದ ತುದಿಯಲ್ಲಿ ಜಗನ್ಮಾತೆಯನ್ನು ಪ್ರತಿಷ್ಠಾಪಿಸಿ ಅಭಿನವ ಶಂಕರರೆನಿಸಿದ್ದಾರೆ. ಈ ಐತಿಹಾಸಿಕ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾದವರೆಲ್ಲರೂ ಗುರುಕೃಪೆಗೆ ವಿಶೇಷವಾಗಿ ಪಾತ್ರರಾದವರು. ಕಳೆದ ಮಾ.22ರಂದು ಕಾಶ್ಮೀರಿ ಪಂಡಿತರು ಶೃಂಗೇರಿಯಿಂದ ಪಂಚಲೋಹದ ವಿಗ್ರಹವನ್ನು ಕಾಶ್ಮೀರದ ತೀತ್ವಾಲ್‌ಗೆ ತಂದಿದ್ದರು ಶ್ರೀ ಶಾರದಾ ಪೀಠದಿಂದ ಬಂದ ಅರ್ಚಕ ವೃಂದವು ಪ್ರತಿಷ್ಠಾಪನಾ ಅಂಗವಾಗಿ ಶ್ರೀ ಶಾರದಾ ದೇವಿ ದೇವಸ್ಥಾನದಲ್ಲಿ ಧಾರ್ಮಿಕ ವಿಧಿ–ವಿಧಾನಗಳಲ್ಲಿ ಪಾಲ್ಗೊಂಡಿದ್ದರು. ವಾಸ್ತು ಹೋಮ, ಕಲಾ ಹೋಮ ಮುಂತಾದ ಧಾರ್ಮಿಕ ಕಾರ್ಯಗಳು ನೆರವೇದವು. ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ ವಿ.ಆರ್. ಗೌರಿಶಂಕರ್ ಉಪಸ್ಥಿತರಿದ್ದರು. ಆ.24ರಂದು ಶ್ರೀ ಶಾರದಾ ಪೀಠದಲ್ಲಿ ಉಭಯ ಜಗದ್ಗುರುಗಳು ಪಂಚಲೋಹದ ಶ್ರೀ ಶಾರದಾಂಬಾ ವಿಗ್ರಹಕ್ಕೆ ಪೂಜೆ ಸಲ್ಲಿಸಿ ಕಾಶ್ಮೀರಕ್ಕೆ ತೆರಳುವ ರಥಯಾತ್ರೆಗೆ ಚಾಲನೆ ನೀಡಿದ್ದರು. ಶ್ರೀಗಳಿಗೆ ಸನ್ಯಾಸಿ ದೀಕ್ಷೆ ನೀಡುವ ಸಂದರ್ಭದಲ್ಲಿ ಮಹಾ ಸನ್ನಿಧಾನಂ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ನಮ್ಮ ಶಿಷ್ಯರು ಮಹತ್ಕಾರ್ಯ ಮಾಡಿ ಶೃಂಗೇರಿಯ ಕೀರ್ತಿಯನ್ನು ಜಗತ್ ಪ್ರಸಿದ್ದ ಮಾಡಲಿದ್ದಾರೆ ಎಂದು ಹೇಳಿದ್ದರು. ಅದು ಒಂದೊಂದಾಗಿ ಸತ್ಯವಾಗುತ್ತಿದೆ. ಮಹಾತ್ಮರ ಮಾತು ವ್ಯರ್ಥ ಆಗುವುದಿಲ್ಲ.ಸನ್ನಿಧಾನ ಸನಾತನ ಧರ್ಮ ಉಳಿಸಿ ಸಂರಕ್ಷಣೆ ಮಾಡುವಲ್ಲಿ ಇನ್ನಷ್ಟು ಮಹತ್ಕಾರ್ಯ ಮಾಡುವಲ್ಲಿ ಯಾವ ಸಂಶಯವೂ ಇಲ್ಲ.

**(–ಕೃಪೆ : ಪ್ರಭಾಕರ ಕಾರಂತ)**

# ಶ್ರೀರಾಮ ಮಂದಿರ ಲೋಕಾರ್ಪಣೆ
## "ಶ್ರೀ ರಾಮನ ಪರಂಪರೆ ಆದರ್ಶಗಳನ್ನು ಸದಾ ಅನುಸರಿಸಬೇಕು"
### – ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



ಅರಸಿಕೆರೆ : ತಾಲ್ಲೂಕಿನ ಹಾರನಹಳ್ಳಿಯ ಯಳವಾರೆಯಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿಯವರ ಕುಟುಂಬ ನೂತನವಾಗಿ ನಿರ್ಮಿಸಿದ ಶ್ರೀ ರಾಮ ಮಂದಿರದಲ್ಲಿ ಶ್ರೀರಾಮ ಸಹಿತ ಸೀತಾ ಲಕ್ಷ್ಮಣ, ಹನುಮಂತ ದೇವರ ಪ್ರತಿಷ್ಠಾಪನೆ ಹಾಗೂ ಮಹಾ ಕುಂಭಾಭಿಷೇಕವು ಶ್ರೀ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ಶ್ರೀ ವಿಧುಶೇಖಭಾರತೀ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಿತು.

ಮಂಗಳವಾರ ಮತ್ತು ಬುಧವಾರಗಳಂದು ಸಂಜೆ ಗೋಧೂಳಿ ಸಮಯದವರೆಗೂ ಶ್ರೀರಾಮ ತಾರಕ ಹೋಮಗಳೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಶ್ರೀರಾಮ ಸಹಿತ ಸೀತಾ, ಲಕ್ಷ್ಮಣ, ಹನುಮಂತ ದೇವರುಗಳಿಗೆ ವಿಶೇಷ ಹೂವಿನ ಅಲಂಕಾರದೊಂದಿಗೆ ರಜತ ಮುಖವಾಡಗಳನ್ನು ಅರ್ಪಿಸಲಾಯಿತು. ಶೃಂಗೇರಿ ಶ್ರೀಮಠದಿಂದ ಆಗಮಿಸಿದ್ದ ಪುರೋಹಿತರ ತಂಡವು ಎಲ್ಲಾ ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಿಕೊಟ್ಟರು.



ಈ ಸಂದರ್ಭದಲ್ಲಿ ಶೃಂಗೇರಿ ಶ್ರೀಮಠದ ಆಡಳಿತಾಧಿಕಾರಿ ಪದ್ಮಶ್ರೀ ಪುರಸ್ಕೃತ ವಿ.ಆರ್. ಗೌರಿಶಂಕರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಕುಟುಂಬದ ಸದಸ್ಯರು, ಮಹಾಸಭಾದ ಪದಾಧಿಕಾರಿಗಳು, ಅಪಾರ ಭಕ್ತರು ಭಾಗವಹಿಸಿ, ಪ್ರಸಾದ ಸ್ವೀಕರಿಸಿ ಶ್ರೀ ರಾಮ ಹಾಗೂ ಶ್ರೀ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

23 ರಂದು ಸ್ವಾಮಿ ಜಗದ್ಗುರುಗಳು ಪಾದಪೂಜೆಯ ನಂತರ ಅನುಗ್ರಹ ಭಾಷಣ ಮಾಡುತ್ತ ಶ್ರೀರಾಮನ ಉನ್ನತ ಆದರ್ಶಗಳನ್ನು ಹಲವು ಉಪಖ್ಯಾನಗಳ ಮೂಲಕ ತಿಳಿಸಿದರು. "ಮರ್ಯಾದಾ ಪುರುಷೋತ್ತಮ" ಶ್ರೀರಾಮನು ಎಂತಹ ಕಷ್ಟಕಾಲದಲ್ಲಿಯು ಧರ್ಮವನ್ನು ಮೀರದೆ, ಧರ್ಮದಗಡಿಯಲ್ಲಿಯೇ ಸದಾ ನಿಲ್ಲುವ



ಮಹಾನ್ ವ್ಯಕ್ತಿತ್ವವನ್ನು, ರಾಮನ ಆದರ್ಶ, ಉನ್ನತ ಮೌಲ್ಯಗಳನ್ನು ಕುರಿತು ಮನ ಮುಟ್ಟುವಂತೆ ಮಾತನಾಡಿದರು. ಶ್ರೀ ರಾಮನಂತೆ ಪರಂಪರೆಯ ಉನ್ನತ ಮೌಲ್ಯಗಳನ್ನು ಸದಾಕಾಲದಲ್ಲಿ ಬಿಡದೆ, ಅನುಸರಿಸಿಕೊಂಡು ಬರಬೇಕು ಎಂದರು. ಇದಕ್ಕೆ ಮೊದಲು ರಾಮಮಂದಿರವನ್ನು ನಿರ್ಮಿಸಿದ ಶ್ರಿ ಅಶೋಕ್ ಹಾರನಹಳ್ಳಿಯವರು ಜಗದ್ಗುರಗಳ ಪಾದ ಪೂಜೆಯನ್ನು ದಂಪತಿ ಸಹಿತವಾಗಿ ನೆರವೇರಸಿ ತಮ್ಮ ತಂದೆಯವರ ಕಾಲದಿಂದಲೂ ಶೃಂಗೇರಿಯೊಂದಿಗಿನ ಅವಿನಾ ಸಂಬಂಧವನ್ನು ಸ್ಮರಿಸಿ ಈ ಹಿಂದೆ ಐದು ಬಾರಿ ಶೃಂಗೇರಿಯ ಹಿರಿಯ ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥರು ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳು ತಮ್ಮ ಕುಟುಂಬದ ಕಾರ್ಯಕ್ರಮಕ್ಕೆ ಆಗಮಿಸಿ ಆಶೀರ್ವದಿಸಿರುವುದನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತ ಇದು ಶೃಂಗೇರಿ ಜಗದ್ಗುರಗಳ ಅನಂತ ಕಾರುಣ್ಯವೆಂದು ತಿಳಿಸಿದರು. ರಾತ್ರಿ ಶ್ರೀ ಚಂದ್ರಮೌಳೇಶ್ವರ ದೇವರಿಗೆ ಜಗದ್ಗುರುಗಳಿಂದ ನಡೆದ ಅಭಿಷೇಕ – ಪೂಜೆಯನ್ನು ಭಕ್ತಾದಿಗಳು ಆನಂದದಿಂದ ಕಣ್ಣುಂಬಿಕೊಂಡರು



# ತರೀಕೆರೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕುಂಭಾಭಿಷೇಕ

# "ಬ್ರಾಹ್ಮಣ್ಯವನ್ನು ಬಿಡದೆ ಧರ್ಮ-ಕರ್ಮಗಳನ್ನು ಆಚರಿಸಬೇಕು"

## - ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



ಇತ್ತೀಚೆಗೆ ತರೀಕೆರೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಕುಂಭಾಭಿಷೇಕದಲ್ಲಿ ಪಾಲ್ಗೊಂಡ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತ ದೇವಸ್ಥಾನದ ಶಿಖರ-ಕಲಶಗಳ ಮಹತ್ವವನ್ನು ತಿಳಿಸಿದರು. ದೇವಸ್ಥಾನದ ಶಿಖರ ನೋಡಿದಾಗ ಭೂಮಿಯಿಂದ ಆಕಾಶದ ಕಡೆಗೆ ಎತ್ತರ, ಎತ್ತರವಾಗಿ ನಿರ್ಮಿಸಿರುತ್ತಾರೆ. ಶಿಖರದ ನಂತರ ಕಾಣುವದೇ ಆಕಾಶ ಅಂದರೆ ಈ ಅಂತರದ ಲೆಕ್ಕ ಅಳೆದವರಿಲ್ಲ. ಅಂದರೆ ಲೆಕ್ಕಕ್ಕೆ ಸಿಗದೆ ಇರುವುದು ಅದೇ ಭಕ್ತ ಹಾಗೂ ಭಗವಂತನ ಅಂತರ. ಹಾಗಾದರೆ ಭಗವಂತ ಎಷ್ಟು ದೊಡ್ಡವನು ಭಕ್ತ ಎಷ್ಟು ಚಿಕ್ಕವನು ಎಂಬ ಅರಿವು ಮೂಡುತ್ತದೆ, ಭಕ್ತ ಅಣುವಿನಷ್ಟು ಮಾತ್ರ.

ಶಿಖರದ ಮೇಲಿರುವ ಕಲಶವೇ/ಕುಂಭೇಶ್ವರನಾಗಿರುತ್ತಾನೆ. ಇದರ ಅರ್ಥ ಕಲಶವನ್ನು ನೋಡಿದಾಗ ದೇವಸ್ಥಾನವಿರುವ ಆ ಸ್ಥಳದಲ್ಲಿ ಭಗವಂತನ ಸಾನ್ನಿಧ್ಯವಿದೆ ಎನ್ನುವುದೇ ಆಗಿದೆ. ಪುರುಷ ಸೂಕ್ತ ಮತ್ತು ಛಾಂದೋಪನಿಷತ್‌ನಲ್ಲಿ ಬರುವ ಮಂತ್ರ ಏತವಾನಸ್ಯ ಮಹಿಮ, ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯ ಅಮೃತಂ ದಿವಿ. ಸಮಸ್ತವೂ ಅಂದರೆ ಜಗತ್ತು ನಿಂತಿರುವುದೇ ಭಗವಂತನ ಒಂದು ಪಾದದಲ್ಲಿ ಒಂದು ಅಂಶದ ಮೇಲೆ ಉಳಿದ 3 ಪಾದಗಳನ್ನು (ಅಂಶ) ತೆಗೆದುಕೊಂಡರೆ ಒಟ್ಟು 4 ಪಾದಗಳಾಗುತ್ತದೆ. ಉಳಿದ 3 ಪಾದಗಳು ಊಹಿಸಲಾಗದ್ದು. ಅಗ್ನಿ, ಜಲ, ತೇಜಸ್ಸು, ವಾಯು, ಆಕಾಶ ಇವೆಲ್ಲವೂ ಪಂಚಭೂತಗಳಾಗಿ ಎಲ್ಲವೂ ಅವನ ಕೃಪೆಯಿಂದ ಸೃಷ್ಟಿಯಾಗಿವೆ. ಲಲಿತಾಸಹಸ್ರನಾಮದಲ್ಲಿ ಬರುವಂತೆ ಅನೇಕ ಕೋಟಿ ಬ್ರಹ್ಮಾಂಡ ಜನನಿ ಎಂಬಂತೆ ಅಮ್ಮನವರ ಅನುಗ್ರಹ ಕೂಡ ಆಗಿದೆ. ಅಂದರೆ ನಾವಿರುವ ಭೂಮಿ ಒಂದು ಗ್ರಹ. ಬ್ರಹ್ಮಾಂಡದ ಉಳಿಕೆ ಗ್ರಹಗಳಿಗೆ ಹೋಲಿಸಿದರೆ ಚಿಕ್ಕದು ಅದರಲ್ಲಿ ನಾವೆಲ್ಲರೂ ಎಲ್ಲ ಜೀವರಾಶಿಗಳೂ ಒಂದು ಅಣು ಮಾತ್ರ. ಆಗ ನಾವು ನಾನು, ಎಂಬ ಅಹಂಕಾರ ಬಿಡಬೇಕಾಗುತ್ತದೆ. ಸತ್ಯಂ, ಜ್ಞಾನಂ, ಅನಂತಂ ಅನಂತ ಎಂದರೆ ಅಳತೆಗೆ ಸಿಗದೆ ಇರುವುದು. ಇಂತಹ ಭಗವಂತನ ಆರಾಧನೆ ನಾವು ಹೇಗೆ ಮಾಡಬೇಕು. ಸೇವೆ ಹೇಗೆ ಮಾಡಬೇಕು ಎಂಬ ಭಾವನೆ ಬಂದಾಗ ಮಾತ್ರ ನಾವು ಮಾಡುವ ಪೂಜೆಗೆ ಅರ್ಥ ಸಿಗುತ್ತದೆ. ಈ ದಿನ ನಡೆದಿರುವ ಶ್ರೀ ಸುಬ್ರಹ್ಮಣ್ಯ ಪೂಜೆ, ಆರಾಧನೆ ಬಗ್ಗೆ ಹೇಳಬೇಕೆಂದರೆ ಶ್ರೀ ಶಂಕರರು ಸುಬ್ರಹ್ಮಣ್ಯ ಭುಜಂಗ ಸ್ತೋತ್ರದಲ್ಲಿ ಹೇಳಿರುವಂತೆ ಸ್ವಾಮಿಯನ್ನು ಹೇಗೆ ನೋಡಬೇಕೆಂದರೆ, ಶರದೃತುವಿನಲ್ಲಿ ಆರು ಪೂರ್ಣ ಚಂದ್ರರ ಬಿಂಬವು ಒಟ್ಟಿಗೆ (ವೃದ್ಧಿ, ಕ್ಷಯವಿಲ್ಲದ್ದು) ಆಕಾಶದಲ್ಲಿ ಕಂಡಂತೆ ಆರು ಮುಖಗಳ ಶ್ರೀ ಸುಬ್ರಹ್ಮಣ್ಯ ಸ್ವಾಮಿಯನ್ನು ನೋಡಬೇಕೆಂದು ಶ್ರೀಗಳು ತಿಳಿಸಿದರು.

ಹಾಗೆಯೇ ಸಾಮಾನ್ಯ ಜನಗಳು ಅಂಗದೇಶ, ವಂಗದೇಶದ ಬಗ್ಗೆ ಚರ್ಚೆ ವ್ಯರ್ಥವಾಗಿ ನಡೆಸುತ್ತಾರೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇದರ ಜೊತೆಗೆ ಸ್ವರ್ಗ, ನರಕ ಎಂಬ ಎರಡು ಲೋಕಗಳ ಬಗ್ಗೆಯೂ ಚರ್ಚಿಸಿದರೆ ಧರ್ಮ ಮತ್ತು ಕರ್ಮಗಳ ಅವಲೋಕನವಾಗುತ್ತದೆ. ಜ್ಞಾನ ಉಂಟಾಗುತ್ತದೆ. ಇನ್ನೂ ಆಯಸ್ಸು ಇದೆ ಮುಂದೆ ನೋಡೋಣ ಎನ್ನುವುದು ಬೇಡ. ಯಾವಾಗ ಮೃತ್ಯು ನಮ್ಮನ್ನು ಕರೆದೊಯ್ಯುತ್ತಾನೋ ಗೊತ್ತಿಲ್ಲ ಆದ್ದರಿಂದ ಸಮಯ ವ್ಯರ್ಥ ಎಂದರು.

ಶಾಸ್ತ್ರ, ಧರ್ಮ, ಸಂಸ್ಕಾರ, ಉಪನಯನ, ವಿವಾಹಾದಿಗಳನ್ನು ಶಾಸ್ತ್ರ ಬಲ್ಲವರಿಂದ ತಿಳಿದು ಮಾಡಿಸಬೇಕೆಂದು ತಿಳಿಸಿದರು. ಬ್ರಾಹ್ಮಣ್ಯವನ್ನು ಬಿಡದೆ ಅನುಸರಿಸಬೇಕು. ಮುಖ್ಯವಾಗಿ ಸಂಧ್ಯಾವಂದನೆಯನ್ನು ಬಿಡಬಾರದು. ಇದಕ್ಕೆ ಗುರುಗಳು ಮಹಾಸ್ವಾಮಿಗಳು ಶ್ರೀ ಶ್ರೀ ಶ್ರೀ ಭಾರತೀ ತೀರ್ಥರು ತಮ್ಮಲ್ಲಿ ಬರುತ್ತಿದ್ದ ಭಕ್ತರಲ್ಲಿ ಏನಪ್ಪ ಎಲ್ಲಿ ಸಂಧ್ಯಾವಂದನೆ ಮಾಡುತ್ತಿದ್ದೀರಾ ಎನ್ನುತ್ತಿದ್ದರು. ಆಗ ಕೆಲವರು ಅವಕಾಶ ಸಿಕ್ಕಾಗ ಮಾಡುತ್ತೇವೆ ಗುರುಗಳೆ. ಕೆಲಸದ ಒತ್ತಡ ಹಾಗೆ ಹೀಗೆ ಕಾರಣ ತಿಳಿಸುತ್ತಿದ್ದರು. ಆಗ ನಮ್ಮ ಮಹಾಸ್ವಾಮಿಗಳು ಎಚ್ಚರಿಸಿ, ಊಟ, ತಿಂಡಿ, ಆಟ, ಪಾಟ, ವ್ಯವಹಾರಗಳಿಗೆ ಸಮಯ ಇದೆ. ಸಂಧ್ಯಾವಂದನೆ ವೇಳೆ ಇಲ್ಲವೆ ಇದು ಕೂಡದು ನಿಮ್ಮ ಒಳಿತಿಗಾಗಿ ಸಂಧ್ಯಾವಂದನೆ ಮಾಡಲೇಬೇಕು ಎಂದು ಸೂಚಿಸುತ್ತಿದ್ದರು. ಕೆಲವು ಸಲ ಆಗ್ರಹ ಪೂರಕ ಮತ್ತು ಪ್ರೀತಿಯಿಂದಲೂ ತಿಳಿಸುತ್ತಿದ್ದರು. ಆದರೆ ಈಗ ನನ್ನಲ್ಲಿ ಬರುವ ಭಕ್ತರಲ್ಲಿ (ವಿಪ್ರರಲ್ಲಿ) ಏನಪ್ಪ ಜನಿವಾರ ಇದೆಯೇ, ಇಲ್ಲವೇ ಎಂದು ಕೇಳಿ, ಆಮೇಲೆ ಸಂಧ್ಯಾವಂದನೆ ಮಾಡುತ್ತಿದ್ದೀರಾ ಎಂದು ಕೇಳಬೇಕಾದ ಪರಿಸ್ಥಿತಿ ಬಗ್ಗೆ ವಿಷಾದಿಸಿದರು.

ಆದ್ದರಿಂದ ಧರ್ಮಾಚರಣೆ ಕರ್ಮಾಚರಣೆಗಳನ್ನು ತಪ್ಪದೆ ಆಚರಿಸಬೇಕೆಂದು ತಿಳಿಸಿ, ಆಗಮಿಸಿದ ಆ ಭಕ್ತರೆಲ್ಲರಿಗೂ ಅನುಗ್ರಹ ಪೂರ್ವಕ ಆಶೀರ್ವಾದ ಮಾಡಿದರು.

## ಕ್ರಿಮಿನಲ್ ಕಾನೂನು ಸಮಿತಿ ರಚನೆ

# ಬ್ರಾಹ್ಮಣರ ನಿಂದನೆ ವಿರುದ್ಧದ ಕಾನೂನು ಹೋರಾಟಕ್ಕೆ ಸಮಿತಿ



ಮಹಾಸಭೆಯ ಅಧ್ಯಕ್ಷ ಅಶೋಕ ಹಾರನಹಳ್ಳಿಯವರ ನೇತೃತ್ವದಲ್ಲಿ ನಡೆದ ವಿಪ್ರ ವಕೀಲರ ಸಭೆಯಲ್ಲಿ ಬ್ರಾಹ್ಮಣ ಸಮುದಾಯದ ವಿರುದ್ಧದ ಹೇಳಿಕೆಗಳ ವಿರುದ್ಧ ಹೋರಾಡಲು **ಕ್ರಿಮಿನಲ್ ಕಾನೂನು ಸಮಿತಿ ರಚಿಸಲು ತೀರ್ಮಾನಿಸಲಾಯಿತು.**

ಇತ್ತೀಚಿಗೆ ಬ್ರಾಹ್ಮಣ ಸಮುದಾಯದ ವಿರುದ್ಧದ ಹೇಳಿಕೆಗಳು ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮುದಾಯವನ್ನು, ಸಾಮಾಜಿಕ ಜಾಲತಾಣದಲ್ಲಿ ನಿಂದನೆ ಮಾಡುವವರ ವಿರುದ್ಧ 02.06.2023ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಗಾಯತ್ರೀ ಭವನದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳುವುದರ ಬಗ್ಗೆ ವಿಪ್ರ ವಕೀಲರ ಸಭೆಯಲ್ಲಿ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಕ್ರಿಮಿನಲ್ ಕಾನೂನು ಸಮಿತಿ ರಚನೆ ಮಾಡಿದರು.

ಇದಕ್ಕೂ ಮುನ್ನ ನಡೆದ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಪುರೋಹಿತರ ಪರಿಷತ್ ವತಿಯಿಂದ ಮಾತನಾಡಿದ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಭಟ್ಟರು "ಪುರೋಹಿತ, ಅರ್ಚಕರು ಸಮಾಜದಲ್ಲಿ ನಾವೀಗ ಭಯದ ವಾತಾವರಣದಲ್ಲಿದ್ದೇವೆ, ನಮ್ಮಿಂದ ಯಾರಿಗೂ ತೊಂದರೆ ಆಗದಿದ್ದರೂ ನಮ್ಮ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಹಾಗಾಗಿ ನಮಗೂ ನ್ಯಾಯಬದ್ಧವಾದ ಕಠಿಣ ಕಾನೂನಿನ ನೆರವಿನ ಅಗತ್ಯವಿದೆ" ಎಂದರು.

ಸಮುದಾಯದ ಮೇಲೆ ನಡೆಯುತ್ತಿರುವ ಆಕ್ರಮಣಕಾರಿ ಪಿತೂರಿ ಮತ್ತು ವ್ಯವಸ್ಥೆಯ ವಿರುದ್ಧ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕಿದೆ ಎಂಬ ಅಭಿಪ್ರಾಯವೂ ಬಂದ ಹಿನ್ನೆಲೆಯಲ್ಲಿ ಕಾನೂನು ಸಮಿತಿ ರಚನೆ ಮಾಡಲಾಗಿದೆಯೆಂದು ಸಭಾ ಅಧ್ಯಕ್ಷರು ತಿಳಿಸಿದರು. ವಿಪ್ರ ಸಮುದಾಯದ ಸಮಾಜ ಎದುರಿಸುತ್ತಿರುವ ಇನ್ನಿತರ ಕಾನೂನು ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕಾನೂನಿನ ನೆರವು, ಸಮುದಾಯದ ವಕೀಲರ ಸಂಘಟನೆ, ಮತ್ತು ಇತರ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಹಿರಿಯ ವಕೀಲ ಪುತ್ತಿಗೆ ರಮೇಶ್ ನೇತೃತ್ವದಲ್ಲಿ ವಕೀಲರ ಸಮಿತಿ ರಚಿಸಲಾಯಿತು. ಇದಲ್ಲದೆ ಹಿರಿಯ ವಕೀಲ ಎ.ಎನ್. ಕೃಷ್ಣಸ್ವಾಮಿ ನೇತೃತ್ವದಲ್ಲಿ ಮಠ ಮಂದಿರಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೆರವು ನೀಡಲು ಉಪ ಸಮಿತಿ ರಚಿಸಲಾಯಿತು.

ಬ್ರಾಹ್ಮಣ ಸಮುದಾಯವನ್ನು ಅದರಲ್ಲೂ ಪುರೋಹಿತರನ್ನು ನಿಂದನೆ ಮಾಡುವವರ ಮೇಲೆ ಕ್ರಿಮಿನಲ್ ಮತ್ತು ಮಾನನಷ್ಟ ಮೊಕದ್ದಮೆ ಹೂಡಲು ಹಿರಿಯ ಕ್ರಿಮಿನಲ್ ವಕೀಲರಾದ ಸಿ.ವಿ. ಸುಧೀಂದ್ರ ಅವರ ನೇತೃತ್ವದಲ್ಲಿ ಉಪ ಸಮಿತಿ ರಚಿಸಲಾಯಿತು.

ಈ ಸಂಧರ್ಭದಲ್ಲಿ ಮಾಜಿ ಅಡಿಶನಲ್ ಅಡ್ವೋಕೇಟ್ ಜೆನರಲ್ ಆರ್. ಸುಬ್ರಮಣ್ಯ, ಮಾಜಿ ಅಡಿಶನಲ್ ಅಡ್ವೋಕೇಟ್ ಜನರಲ್ ಅರುಣ್ ಶ್ಯಾಮ್, ಹಿರಿಯ ವಕೀಲರುಗಳಾದ ಮನಮೋಹನ್, ಪ್ರಶಾಂತ್‌ಚಂದ್ರ, ಚಂದ್ರಶೇಖರ, ಬಾಲಗಂಗಾಧರ, ಶಂಕರ ಭಟ್, ಸುಧಾಕರ್ ಬಾಬು, ಟಿ.ಎನ್. ರಮೇಶ್, ಬಿ.ಆರ್.ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.



# ಉದ್ಯಮಿ ಎಂ.ವಿ. ಸತ್ಯನಾರಾಯಣರವರು ಸಮಾಜಕ್ಕೆ ಮಾದರಿ

ಸಂಸ್ಕೃತಿ, ದಾನ, ಸೇವೆಯನ್ನು ಮೈಗೂಡಿಸಿ ಕೊಂಡಿರುವ ಕೈಗಾರಿಕೋದ್ಯಮಿ ಎಂ.ವಿ. ಸತ್ಯನಾರಾಯಣರವರು ಸಮಾಜಕ್ಕೆ ಮಾದರಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷರಾದ ಅಶೋಕ ಹಾರನಹಳ್ಳಿಯವರು ಹೇಳಿದರು. ಎಂ.ವಿ. ಸತ್ಯನಾರಾಯಣ ಅವರು ಕೈಗಾರಿಕೆ ಕ್ಷೇತ್ರದಲ್ಲಿ 50 ವರ್ಷ ಪೂರೈಸಿದ ನಿಮಿತ್ತ ಇತ್ತೀಚೆಗೆ ನಗರದ ಬಬ್ಬೂರುಕಮ್ಮೆ ಸೇವಾ ಸಮಿತಿಯಲ್ಲಿ ಜ್ಞಾನದೀಪಿಕ ಎಜುಕೇಷನ್ ಟ್ರಸ್ಟ್ ಅಭಿನಂದನ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ 'ಸಚ್ಚರಿತ' ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪತ್ನಿ ಜೊತೆಗೆ ಸನ್ಮಾನ ಸ್ವೀಕರಿಸಿದ ಎಂ.ವಿ. ಸತ್ಯನಾರಯಣ ಮಾತನಾಡಿ, ಯುವ ಸಮುದಾಯದ ಎದುರು ಸಾಕಷ್ಟು ಅವಕಾಶಗಳಿವೆ. ಅವರ ಸಾಧನೆಗೆ ಆಕಾಶವೇ ಮಿತಿ ಎಂಬ ವಾತಾವರಣ ಇದೆ. ಇತಹ ಅವಕಾಶಗಳನ್ನು ಬಳಸಿ ಯುವಕರು ಅಭಿವೃದ್ಧಿಯ ಉನ್ನತ ಹಂತಕ್ಕೆ ತಲುಪುವಂತೆ ಕರೆನೀಡಿದರು. ಪ್ರೊ.ಎಚ್.ಎಸ್. ಲಕ್ಷ್ಮೀನಾರಾಯಣ ಭಟ್, ಜ್ಞಾನದೀಪಿಕ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ॥ ಸತ್ಯಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಇಂಡಿಯನ್ ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ ದಕ್ಷಿಣ ವಿಭಾಗದ ಅಧ್ಯಕ್ಷ ಆರ್. ಪ್ರಕಾಶ್ ಉಪಸ್ಥಿತರಿದ್ದರು.

# ಶ್ರೀ ಕೂಡಲಿ ಶೃಂಗೇರಿ ಮಠದ ಶಿಷ್ಯ ಸ್ವೀಕಾರ ಸಮಾರಂಭ



ಶ್ರೀ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳವರಿಂದ ಬ್ರಹ್ಮಚಾರಿ ಶ್ರೀ ದತ್ತರಾಜ ದೇಶಪಾಂಡೆಯವರ ಸಂನ್ಯಾಸಪೂರ್ವಕ ಶಿಷ್ಯ ಪರಿಗ್ರಹಣ ಸಮಾರಂಭವು ಮೇ 18 ರಿಂದ 22ರವರೆಗೆ ವಿಧಿವತ್ತಾಗಿ ಸಾಂಗೋಪಾಂಗವಾಗಿ ಶ್ರೀ ಕೂಡಲಿ ಶೃಂಗೇರಿ ಮಠದಲ್ಲಿ ನೆರವೇರಿತು.

ಶಿಷ್ಯ ಸ್ವೀಕಾರದ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀಗಳು ಅನುಗ್ರಹ ಭಾಷಣ ಮಾಡುತ್ತ ಕೂಡಲಿ ಕ್ಷೇತ್ರದ ಹಾಗೂ ಮಠದ ಮಹಿಮೆ ಪರಂಪರೆಗಳನ್ನು ತಿಳಿಸಿದರು. ತುಂಗಾ ಮತ್ತು ಭದ್ರಾ ಎರಡು ನದಿಗಳ ಕೂಡುವಿಕೆಯಿಂದ ಕೂಡಲಿ ಎಂಬ ಹೆಸರು ಬಂದಿರುತ್ತದೆ. ಇದಕ್ಕೆ ಇನ್ನೂ ಹಿಂದಿನ ಬುನಾದಿ ಎಂದರೆ ವರಾಹ ಅವತಾರ ಮರಗಿಡ ಮೇಲೆ ಸ್ವಾಮಿಯ ವರಾಹ ಪರ್ವತದಲ್ಲಿ ಎರಡು ಕೋರೆ ಹಲ್ಲುಗಳಲ್ಲಿ ಬಲಗಡೆ ಕೋರೆಯಿಂದ ತುಂಗಾ ಎಡಗಡೆಯಿಂದ ಭದ್ರಾ ನದಿ ಹುಟ್ಟಿ ಬಹುದೂರದಿಂದ ಬಂದು ಈ ಕ್ಷೇತ್ರದಲ್ಲಿ ಎರಡು ನದಿಗಳು ಕೂಡುತ್ತದೆ. ತುಂಗಾ ಹರಿ ಸ್ವರೂಪ, ಭದ್ರ ಹರನ ಸ್ವರೂಪ, ಈ ಎರಡರ ಕೂಡುವಿಕೆ ಸಂಗಮವೇ ಬ್ರಹ್ಮ ದೇವರು ಬ್ರಹ್ಮತೀರ್ಥ ಎಂಬುದಾಗಿದೆ. ಕೂಡಲಿಯಲ್ಲಿ ಅಮೃತರೂಪದಲ್ಲಿದ್ದ ಹರಿಹರರು ಮುಂದೆ ಹರಿಹರದಲ್ಲಿ ಎದ್ದು ನಿಂತು ದರ್ಶನ ನೀಡುತ್ತಾನೆ ಹರಿಹರೇಶ್ವರನಾಗಿ. ಕಾಶ್ಮೀರದ ಶಾರದಾದೇವಿ ಅನುಗ್ರಹದಿಂದ ಸರ್ವಜ್ಞಪೀಠ ಏರಿದ ಶಂಕರರು ಕಾಶ್ಮೀರದ ಶಾರದಾ ದೇವಿಯನ್ನು ತರುವ ಮಾರ್ಗದಲ್ಲಿ ಕೂಡಲಿ ಕ್ಷೇತ್ರದ ತುಂಗಭದ್ರಾ ಸಂಗಮದ ಎದುರು ನಿಂತಳು ಎಂಬುದನ್ನು ಐತಿಹ್ಯ ತಿಳಿಸುತ್ತದೆ ಎಂದರು. ಹೀಗೆ ನದಿಗೆ ಎದುರಾಗಿ ನಿಂತಿರುವ ಶಾರದೆ ಎಲ್ಲಿಯಾದರೂ ಇದ್ದರೆ ಅದು ಕೂಡಲಿ ಮಾತ್ರವಾಗಿದೆ. ಪುರ ತುಂಗಭದ್ರಾ ಅಂದರೆ ಶಾರದಾ ಅಮ್ಮನವರು ತುಂಗಾ ಭದ್ರಾ ನೋಡುತ್ತಾ ನಿಂತಿದ್ದಾರೆ ಎಂಬುದಾಗಿದೆ. ಇಂತಹ ಕ್ಷೇತ್ರದಲ್ಲಿ ಅಭಿನವ ಶಂಕರ ಭಾರತೀ ಸ್ವಾಮಿಗಳು ಈ ಪೀಠದ ಉತ್ತರಾಧಿಕಾರಿಗಳಾಗಿ ಸ್ವೀಕರಿಸಲಾಗಿದೆ ಎಂದು ಕ್ಷೇತ್ರದ ಮಹಿಮೆಯನ್ನು ತಿಳಿಸಿದರು. ಅಮ್ಮನವರ ಅನುಗ್ರಹ ಮತ್ತು ಆಶೀರ್ವದೊಂದಿಗೆ ದತ್ತಾವಧೂತ ಹೆಬ್ಬಳ್ಳಿ ಸ್ವಾಮಿಗಳ ಸಾಧನೆ ಮತ್ತು ಪರಿಶ್ರಮದಿಂದ ಹಾಗೂ ಭಕ್ತರ ಪ್ರೀತಿ, ಭಕ್ತಿಯ ದ್ಯೋತಕವಾಗಿ ಶಿಷ್ಯ ಸ್ವೀಕಾರ, ಪೀಠಾರೋಹಣ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದೆ ಎಂದರು.

ಹೆಬ್ಬಳ್ಳಿ ದತ್ತಾವಧೂತರು ತಮಗೆ ಸೂಚಿಸಿದ ದತ್ತರಾಜ ದೇಶಪಾಂಡೆಯವರನ್ನು, ಆರ್.ಎಸ್.ಎಸ್. ಮತ್ತು ವಿಶ್ವ ಹಿಂದೂ ಪರಿಷತ್ ಮುಖಂಡರು ಎಲ್ಲರೊಂದಿಗೆ ಚರ್ಚಿಸಿ ಶಾಸ್ತ್ರ, ಭಾಷಾ ಪ್ರೌಢಿಮೆ, ವೇದ, ಉಪನಿಷತ್, ನ್ಯಾಯ ಮೀಮಾಂಸೆ ಎಲ್ಲದರಲ್ಲೂ ಜ್ಞಾನ ಹೊಂದಿರುವ ಇವರನ್ನು ಶಿಷ್ಯರಾಗಿ ಶ್ರೀಮಠದ ಉತ್ತರಾಧಿಕಾರಿಯಾಗಿ ಸ್ವೀಕರಿಸಿದೆ ಎಂದರು. ಕಂಚಿ ಸ್ವಾಮಿಗಳ ಅನುಗ್ರಹ ಎಲ್ಲರ ಸಕಾರದಿಂದ ಈ ಕರ್ಯಕ್ರಮ ನೇರವೇರಿದೆ. ಭರಣಿ ಶಾಸ್ತ್ರಿಗಳು, ಗಣೇಶ ಶಾಸ್ತ್ರಿಗಳು, ಇನ್ನೂ ಹಲವಾರು ಗಣ್ಯರೆಲ್ಲರೂ ಬಂದು ತಮ್ಮ ಶಿಷ್ಯರೊಂದಿಗೆ ಮತ್ತು ವೇದಗಳ ಪಾರಾಯಣ, ಶಾಸ್ತ್ರಗಳು, ಅಷ್ಟಕ ಶ್ರಾದ್ಧ ವಿಧಿವಿಧಾನಗಳು, ಭಕ್ತಿ, ಶ್ರದ್ಧೆಯಿಂದ ಕ್ರಮವಾಗಿ ನಡೆದಿದೆ. ಶಿವಮೊಗ್ಗ ಬ್ರಾಹ್ಮಣ ಮಹಾಸಭಾ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮುಖ್ಯವಾಗಿ ದತ್ತಧೂತರ ನೇತೃತ್ವ ಸಹಕಾರದೊಂದಿಗೆ ಯಶಸ್ವಿಯಾಗಿ ಕಾರ್ಯಕ್ರಮ ಪರಿಪೂರ್ಣವಾಗಿ ನೆರವೇರಿತು. "ಅಭಿನವ ಶಂಕರಭಾರತೀ" ಎಂಬ ಹೆಸರಿಂದ ಶಿಷ್ಯರಾಗಿ ಸ್ವೀಕರಿಸಿದ್ದೇವೆ. ಇವರ ಕಾಲದಲ್ಲಿ ಇನ್ನೂ ಆಗಬೇಕಾಗಿರುವ ಕೆಲಸಕಾರ್ಯಗಳು, ವೇದಪಾಠಶಾಲೆಗಳನ್ನು ಸ್ಥಾಪಿಸಿ, ಉತ್ತುಂಗ ಶಿಖರಕ್ಕೆ ಏರಲಿ, ಗುರುಪರಂಪರೆ ಉಳಿಯಲಿ, ಅಮ್ಮನವರ ಆಶೀರ್ವಾದದೊಂದಿಗೆ ಯಶಸ್ವಿಯಾಗಲಿ ಎಂಬುದಾಗಿ ಆಶೀರ್ವದಿಸಿದರು.

ನೂತನ ಶ್ರೀಗಳಾದ ಅಭಿನವ ಶಂಕರ ಭಾರತೀ ಸ್ವಾಮಿಗಳು ಪರಂಪರೆಯ ಸಾಮರ್ಥ್ಯವನ್ನು ತಿಳಿಸುತ್ತ ಶ್ರೀ ಶಂಕರಾಚಾರ್ಯರ ಉನ್ನತ ಪರಂಪರೆಯನ್ನು ತಾವು ಪರಿಪಾಲಿಸಿಕೊಂಡು ಹೋಗುವುದಾಗಿ ತಿಳಿಸಿದರು.

ಮೊದಲು ಮಾತನಾಡಿದ ಹೆಬ್ಬಳ್ಳಿಯ ಚೈತನ್ಯಾಶ್ರಮದ ಶ್ರೀ ದತ್ತಾವಧೂತರು ಮಾತನಾಡುತ್ತ ಇಂದು ಶ್ರೀ ಮಠದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ದಿನವಾಗಿದೆ. ಬೆಳಗಾವಿಯ ದತ್ತರಾಜ ದೇಶಪಾಂಡೆಯವರು ಶ್ರೀ ಅಭಿನವ ಶಂಕರ ಭಾರತೀಗಳಾಗಿ ಶ್ರೀ ಮಠದ ಉತ್ತಾರಧಿಕಾರಿಯಾಗಿ ಮಠದ ಪರಂಪರೆಯನ್ನು ಹಾಗೂ ಶ್ರೇಯೋಭಿವೃದ್ಧಿಗಳನ್ನು ಉನ್ನತ ಮಟ್ಟಕ್ಕೆ ಏರಿಸುವುದರಲ್ಲಿ ಸಂಶಯವಿಲ್ಲವೆಂದರು.

ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ, ಶಿವಮೊಗ್ಗ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ನಟರಾಜ್ ಭಾಗವತ್, ಭರಣಿ ಶಾಸತ್ರಿಗಳು, ಗಣೇಶ ಶಾಸ್ತ್ರಿಗಳು ಪುರೋಹಿತರು, ವಿದ್ವಾಂಸರು, ಆರ್.ಎಸ್.ಎಸ್. ಮುಂಖಡರುಗಳು ಅಪಾರ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹೈದರಾಬಾದಿನಲ್ಲಿ ಬೃಹತ್ ಬ್ರಾಹ್ಮಣರ ಭವನದ ಉದ್ಘಾಟನೆ



ಹೈದರಾಬಾದಿನಲ್ಲಿ ತೆಲಂಗಾಣ ಸರ್ಕಾರದಿಂದ ನಿರ್ಮಿಸಿರುವ ಬೃಹತ್ ಬ್ರಾಹ್ಮಣ ಭವನದ ಉದ್ಘಾಟನಾ ಸಮಾರಂಭವು ತೆಲಂಗಾಣದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಚಂದ್ರಶೇಖರ ರಾವ್ ರವರ ಅಮೃತ ಹಸ್ತದಿಂದ ನೆರವೇರಿತು. ಈ ಸಮಾರಂಭದಲ್ಲಿ ಮಹಾಸಭೆಯ ಪ್ರತಿನಿಧಿಗಳಾಗಿ ಭಾಗವಹಿಸಿದ ಅಖಿಲ ಭಾರತ ಬ್ರಾಹ್ಮಣ ಫೆಡರೇಷನ್ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಶ್ರೀ ಉಮೇಶ ಶಾಸ್ತ್ರಿ ತೆಲಂಗಾಣ ಮುಖ್ಯಮಂತ್ರಿಗಳಿಗೆ ಶ್ರೀ ಪರಶುರಾಮ ಮೂರ್ತಿಯನ್ನು ನೀಡಿ ಗೌರವಿಸಿದರು.

# ಬೆಂಗಳೂರಿನಲ್ಲಿ ಜುಲೈ 3 ರಿಂದ ಹರಿಹರಪುರ ಶ್ರೀಗಳ ಚಾತುರ್ಮಾಸ್ಯ

## ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸ್ವರಸ್ವತೀ ಮಹಾಸ್ವಾಮಿಗಳಿಂದ ಆಹ್ವಾನ ಪತ್ರಿಕೆ ಬಿಡುಗಡೆ



ಬೆಂಗಳೂರು : ಹರಿಹರಿಪುರ ಮಠದ ಶ್ರೀಮದ್ಜಗದ್ಗುರು ಶಂಕರಾಚಾರ್ಯ ಸ್ವಯಂ ಪ್ರಕಾಶ ಸಚ್ಚಿದಾನಂದ ಸ್ವರಸ್ವತೀ ಮಹಾಸ್ವಾಮೀಜಿ ಈ ಬಾರಿಯ ಚತುರ್ಮಾಸ ವ್ರತವನ್ನು ಮಹಲಕ್ಷ್ಮೀ ಲೇಔಟ್‌ನಲ್ಲಿ ಆಚರಿಸುವ ಸಂಕಲ್ಪ ಮಾಡಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಜುಲೈ 3 ರಿಂದ ಸೆಪ್ಟಂಬರ್ 29 ರವರೆಗೆ ನಡೆಯಲಿದ್ದು, ಶುಕ್ರವಾರ ಗಿರಿನಗರದ ಶ್ರೀಮಠದಲ್ಲಿ ಸ್ವಾಮೀಜಿಯವರು ಭಕ್ತರ ಸಮ್ಮುಖದಲ್ಲಿ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದರು. ಈ ವೇಳೆ ಅಖಿಲ ಕರ್ನಾಟಕ ಬ್ರಹ್ಮಣ ಮಹಾಸಭಾದ ಅಧ್ಯಕ್ಷರೂ ಮತ್ತು ಸಮಿತಿ ಗೌರವ ಸಲಹೆಗಾರರೂ ಆಗಿರುವ ಅಶೋಕ ಹಾರನಹಳ್ಳಿ, ಪ್ರಧಾನ ಸಂಚಲಕ ರಾಘವೇಂದ್ರ ಭಟ್, ಮಠದ ಆಡಳಿತಾಧಿಕಾರಿ ರವಿಸಂಕರ್, ಎನ್.ಎಸ್.ನರಸಿಂಹಮೂರ್ತಿ ಮತ್ತಿತರರು ಇದ್ದರು. ಚಾತುರ್ಮಾಸ್ಯ ಮಹೋತ್ಸವ ಸೇವ ಸಮಿತಿ ಗೌರವಾಧ್ಯಕ್ಷರಾಗಿ ಮಹಾಲಕ್ಷ್,ಇ ಲೇಔಟ್ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಗೋಪಾಲಯ್ಯ ಅವರನ್ನು ನೇಮಿಸಿದ್ದು, ಗುರು ಸೇವೆಗಾಗಿ ಸರ್ವರೂ ಚಾತುರ್ಮಾಸ್ಯ ವ್ರತಕ್ಕೆ ಆಗಮಿಸಬೇಕೆಂದು ಕೋರಿದ್ದಾರೆ.

# ಅನಿವಾಸಿ ಬ್ರಾಹ್ಮಣರ ಸಂಘಟನೆಗಾಗಿ ಸಭೆ

ಅನಿವಾಸಿ ಬ್ರಾಹ್ಮಣ ಸಮುದಾಯದವರನ್ನು ಸಂಘಟಿಸುವುದಕ್ಕೋಸ್ಕರ ಅಮೆರಿಕದಿಂದ ಆಗಮಿಸಿದ ಪ್ರಮುಖರ ಜೊತೆ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿಯವರು ಸಭೆ ನಡೆಸಿದರು. ವಿದೇಶದಲ್ಲಿರುವ ಕರ್ನಾಟಕದ ಬ್ರಾಹ್ಮಣರ ಸಂಘಟನೆ ಹಾಗೂ ಮಹಾಸಭಾ ಹಮ್ಮಿಕೊಂಡಿರುವ ಸಮಾಜಮುಖಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಪನ್ಮೂಲ ಕ್ರೋಢಿಕರಣದ ಕುರಿತು ಚರ್ಚೆ ನಡೆಸಲಾಯಿತು. ಈ ಸಭೆಯಲ್ಲಿ ಅಮೆರಿಕಾದ ನಾರ್ತ್ ಕೆರೋಲಿನಾದ ಶ್ರೀ ಬಾಪು ಶ್ರೀನಿಧಿ, ನ್ಯೂಯಾರ್ಕ್‌ನ ಶ್ರೀರಾಮ್ ವೆಲ್ಲಿಯೂರ್ ಮತ್ತು ಚಿಕಾಗೋನ ಮುರಳಿ ಬಲಕೂಟಂ ಭಾಗವಹಿಸಿದ್ದು, ಸಂಘಟನಾ ಕಾರ್ಯದರ್ಶಿಗಳಾದ ರವಿಕುಮಾರ್ ಮತ್ತು ದ್ವಾರಕನಾಥ್ ಅವರು ಉಪಸ್ಥಿತರಿದ್ದರು.



# 20 ವಟುಗಳಿಗೆ ಮಧುಗಿರಿಯಲ್ಲಿ ಉಪನಯನ ಕಾರ್ಯಕ್ರಮ




ಮಧುಗಿರಿಯ ಶ್ರೀ ಶಂಕರ ಸೇವಾ ಸಮಿತಿಯ ಆಶ್ರಯದಲ್ಲಿ ಸುಮಾರು 20 ವಟುಗಳಿಗೆ ಸಾಮೂಹಿಕ ಉಪಯನ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಸಮಿತಿಯ ಅಧ್ಯಕ್ಷರಾದ ಬಿ.ಆರ್. ಸತ್ಯನಾರಾಯಣರವರು ಮಾತನಾಡಿ ನಿತ್ಯ ಸಂಧ್ಯಾವಂದನೆಯಿಂದ ಹಾಗೂ ಪ್ರತಿದಿನ ಗಾಯತ್ರಿ ಜಪ ಮಾಡುವುದರಿಂದ ಮನುಷ್ಯನಿಗೆ ತನ್ನೆಲ್ಲಾ ಕಾರ್ಯದಲ್ಲೂ ಯಶಸ್ಸಾಗುವುದು ಎಂದು ಹೇಳಿದರು. ವೇ॥ಬ್ರ॥ಶ್ರೀ ಕೆ. ನಾಗರಾಜಶಾಸ್ತ್ರಿಗಳು ಹಾಗೂ ವೇ॥ಬ್ರ॥ಶ್ರೀ ವಿನಯ್‌ಶರ್ಮ ರವರ ನೇತೃತ್ವದ ಋತ್ವಿಕರ ತಂಡ ಅತ್ಯಂತ ಯಶಸ್ವಿಯಾಗಿ ಉಪನಯನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಸಮಿತಿಯ ಗೌರವಾಧ್ಯಕ್ಷರಾದ ಎಸ್.ವಿ. ಸೂರ್ಯನಾರಾಯಣರಾವ್, ಖಜಾಂಚಿ ಕೆ. ಲಕ್ಷ್ಮೀಪ್ರಸಾದ್ ಹಾಗೂ ನಿರ್ದೇಶಕರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಅಪಾರ ವಿಪ್ರಬಂಧುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಮಹಾಸಭೆಯಲ್ಲಿ ನಡೆದ ಯಶಸ್ವೀ ರಕ್ತದಾನ ಹಾಗೂ ಅಂಗಾಂಗ ದಾನ ಶಿಬಿರ
# ಅಂಗಾಂಗ ದಾನ ಪವಿತ್ರ ಕಾರ್ಯ

**– ಡಾ.ಡಿ.ವಿ. ಗುರುಪ್ರಸಾದ್**




ಮಹಾಸಭೆಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಉದ್ಘಾಟಿಸುತ್ತಾ ಅಂಗಾಂಗ ದಾನ ಪವಿತ್ರ ಕಾರ್ಯ ಎಂದು ನಿವೃತ್ತ ಪೋಲೀಸ್ ಮಹಾನಿರ್ದೇಶಕ ಡಾ.ಡಿ.ವಿ. ಗುರುಪ್ರಸಾದ್ ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಗಾಯತ್ರಿ ಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ, ಅಂಗಾಂಗ ದಾನದ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ದೇಹದ ಅಂಗವೊಂದನ್ನು ದಾನ ಮಾಡಿದರೆ ಶವಸಂಸ್ಕಾರ ಅಪೂರ್ಣವಾಗುತ್ತದೆ ಎಂಬ ಭಾವನೆಯಿದೆ. ಇದನ್ನು ಹೋಗಲಾಡಿಸಲು ಮಠದ ಸ್ವಾಮೀಜಿಗಳು ಅಂಗಾಂಗ ದಾನ ಮಾಡುವುದು ಉತ್ತಮ ಕಾರ್ಯ ಎಂಬ ಹೇಳಿಕೆಯನ್ನು ನೀಡಬೇಕೆಂದರು.

ಅಂಗಾಂಗ ದಾನದ ಬಗ್ಗೆ ಜಾಗೃತಿ ಶಿಬಿರಗಳು ಹೆಚ್ಚಾಗುತ್ತಿವೆ. ಎಲ್ಲರೂ ದೇಹವನ್ನು ದಾನ ಮಾಡುವ ಮೂಲಕ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗೆ ಶಸ್ತ್ರಚಿಕಿತ್ಸೆ ಮಾಡಿ ತಮ್ಮ ಕೌಶಲ್ಯ ಹೆಚ್ಚಿಸಲು ಸಹಾಯ ಮಾಡಬೇಕು. ಈಗಾಗಲೇ ನಟ ಡಾ. ರಾಜಕುಮಾರ್ ನೇತ್ರದಾನದ ಬಗ್ಗೆ ಅರಿವು ಮೂಡಿಸಿದ್ದಾರೆ. ಅದೇ ರೀತಿ ಮೂತ್ರಪಿಂಡ, ಹೃದಯ, ಶ್ವಾಸಕೋಶ ಸೇರಿದಂತೆ ದೇಹದ ಇತರ ಅಂಗಾಂಗಗಳ ದಾನದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾಗಿದೆ ಎಂದರು.

ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಕಿರಣ್‌ಕುಮಾರ್ ಮಾತನಾಡಿ, ಬೆಂಗಳೂರಿನಲ್ಲಿ ಅಂಗಾಂಗ ದಾನಿಗಳ ಸಂಖ್ಯೆ ಹೆಚ್ಚಿದೆ. 70 ಆಸ್ಪತ್ರೆಗಳಲ್ಲಿ ಅಂಗಾಂಗ ದಾನ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೆದುಳು ನಿಷ್ಕ್ರಿಯಗೊಂಡ ಸಂದರ್ಭದಲ್ಲಿ ಸಂಬಂಧಿಕರಿಗೆ ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಅವರ ಸಹಿಯಿಲ್ಲದೆ ದಾನ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಾಜಿ ಅಧ್ಯಕ್ಷ ಡಾ॥ ಎಂ.ಆರ್.ವಿ. ಪ್ರಸಾದ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಹೊ.ನಾ. ಹಿರಿಯಣ್ಣಸ್ವಾಮಿ, ಡಾ. ಮುರಳೀಧರ್, ಮಹಿಳಾ ವಿಭಾಗದ ರಾಜ್ಯ ಸಂಚಾಲಕಿ ಶ್ರೀಮತಿ ಶುಭಮಂಗಳ ಸುನೀಲ್ ಮತ್ತಿತರರಿದ್ದರು. ಕಾರ್ಯಕ್ರಮದಲ್ಲಿ ಹಲವರು ರಕ್ತದಾನ ಮಾಡಿದರು.




## ವಸಂತಪುರ ವಿಪ್ರ ಬಳಗದಲ್ಲಿ ಸಾಮೂಹಿಕ ಉಪನಯನ

ಬೆಂಗಳೂರಿನ ವಸಂತಪುರ ಶ್ರೀ ಭವಾನಿ ಶಂಕರ ದೇವಾಲಯದ ಆವರಣದಲ್ಲಿ ವಿಪ್ರಬಳಗದ ಕ್ರಿಯಾಶೀಲ ಅಧ್ಯಕ್ಷರಾದ ಟಿ.ಎಸ್. ನಾಗರಾಜ ಉಪಾಧ್ಯಾಯರವರ ಮೇಲುಸ್ತುವಾರಿಯಲ್ಲಿ ಉಪನಯನ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು. ಶ್ರೀ ಭವಾನಿ ಶಂಕರ ದೇವಾಲಯದ ಪ್ರಧಾನ ಅರ್ಚಕರಾಗಿರುವ ವೇದಬ್ರಹ್ಮ ಶ್ರೀ ಭಾಲಚಂದ್ರಶಾಸ್ತ್ರಿಯವರು ಉಪನಯನದ ವಟುಗಳಿಗೆ ಬ್ರಹ್ಮೋಪದೇಶದ ಮಹತ್ವವನ್ನು ತಿಳಿಸಿ, ಹಿತವಚನಗಳನ್ನು ನೀಡಿ, ಆಶೀರ್ವಾದಪೂರ್ವಕ ಉಡುಗೊರೆ ನೀಡಿದರು. ವಿಪ್ರ ಬಳಗದ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಸಾಮೂಹಿಕ ಉಪನಯನ ದಿವಸದ ಸರ್ವತೋಮುಖ ಯಶಸ್ವಿಗೆ ಉತ್ತಮವಾಗಿ ಸಹಕರಿಸಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗಸಂಸ್ಥೆಯಾದ ವಿಪ್ರ ಬಳಗವು ಅನೇಕ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ವಿಭಾಗಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದು, ವಿಪ್ರಬಾಂಧವರ ಮೆಚ್ಚುಗೆಗೆ ಪಾತ್ರವಾಗಿರುತ್ತದೆ. ಓ.ರಾಮಮೂರ್ತಿ ಭಟ್‌ರವರು ವಿಪ್ರ ಬಳಗದ ಸಂಸ್ಥಾಪಕ ಹಾಗೂ ನಿಕಟಪೂರ್ವ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಶ್ರೀ ಅಕ್ಷೋಭ್ಯ ರಾಮಪ್ರಿಯ ಶ್ರೀಗಳಿಗೆ ಅಭಿನಂದನಾ ಸಮಾರಂಭ




ದಿನಾಂಕ 03.06.2023ರ ಶನಿವಾರ ಸಂಜೆ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ ವತಿಯಿಂದ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಬಾಳಗಾರು ಶ್ರೀ ಮದಾರ್ಯ ಅಕ್ಷೋಭ್ಯ ತೀರ್ಥ ಸಂಸ್ಥಾನದ ಕಿರಿಯ ನೂತನ ಯತಿಗಳಾದ ಶ್ರೀ ಶ್ರೀ ಅಕ್ಷೋಭ್ಯ ರಾಮಪ್ರಿಯ ತೀರ್ಥ ಶ್ರೀಪಾದಂಗಳಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀಪಾದಂಗಳಿಗೆ ಮಹಾಸಭಾ ವತಿಯಿಂದ ಗೌರವ ಸಮರ್ಪಣೆಯನ್ನು ಸಲ್ಲಿಸಲಾಯಿತು.

ಈ ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ವಹಿಸಿದ್ದರು. ಬಸವನಗುಡಿ ಕ್ಷೇತ್ರದ ಶಾಸಕರಾದ ಶ್ರೀ ರವಿಸುಬ್ರಮಣ್ಯರವರು ಅತಿಥಿಗಳಾಗಿ ಭಾಗವಹಿಸಿದ್ದರು.





ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದ ಸವದತ್ತಿ ಶಾಸಕ ಶ್ರೀ ವಿಶ್ವಾಸ್ ವೈದ್ಯ ಇವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ಮಹಾಸಭೆಯ ಪರವಾಗಿ ಶಾಸಕರಾದ ವಿಶ್ವಾಸ್ ವೈದ್ಯ ಇವರನ್ನು ಅಭಿನಂದಿಸಿ, ಮಹಾಸಭೆಯ ಸಂಘಟನೆ ಹಾಗೂ ಸಮಾಜಮುಖಿ ಕಾರ್ಯಕ್ರಮಗಳಿಗೆ ಅವರ ಬೆಂಬಲ ಸಹಾಕಾರವನ್ನು ಕೋರಿದರು.

## ತುಮಕೂರು ಮಹಿಳಾ ವಿಭಾಗದಿಂದ ದೇವಸ್ಥಾನ ಪರಿಸರದ ಸ್ವಚ್ಛತೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತುಮಕೂರು ಜಿಲ್ಲಾ ಮಹಿಳಾ ವಿಭಾಗದಿಂದ ಕ್ಯಾತಸಂದ್ರದ ತೋಪಾಂಜನೇಯ ಸ್ವಾಮಿ ದೇವಸ್ಥಾನವನ್ನು ಇತ್ತೀಚೆಗೆ ಸ್ವಚ್ಛ ಮಾಡಲಾಯಿತು. ಇದರಲ್ಲಿ ತುಮಕೂರು ವಿಭಾಗದ ಪದಾಧಿಕಾರಿಗಳು, ಅನೇಕ ಮಹಿಳೆಯರು ಪಾಲ್ಗೊಂಡಿದ್ದರು.

# ಅಂತರ ರಾಷ್ಟ್ರೀಯ ಯೋಗ ದಿನ ಪ್ರಯುಕ್ತ
# ದೇಶದ ಪ್ರಸಿದ್ಧ ಯೋಗ ಚಿಕಿತ್ಸೆ ಪರಿಣಿತೆ ಡಾ. ಆರ್. ನಾಗರತ್ನ ಅವರೊಡನೆ ಸಂದರ್ಶನ

ಸಂದರ್ಶಕರು : **ಪ್ರೊ: ಎಂ.ಕೆ. ಶ್ರೀಧರ್**

***ನಮಸ್ಕಾರ ಡಾ. ಆರ್. ನಾಗರತ್ನ ಅವರೇ, 2023ರ ಅಂತಾರಾಷ್ಟ್ರೀಯ ಯೋಗ ದಿನ ಸುಸಂದರ್ಭದಲ್ಲಿ ತಮ್ಮನ್ನು ಪರಿಚಯಿಸಲು ಮಹಾಸಭೆಗೆ ಹೆಮ್ಮೆಯಾಗುತ್ತದೆ. ನಮ್ಮ ಬೆಂಗಳೂರಿಗೆ, ನಾಡಿಗೆ, ದೇಶಕ್ಕೆ, ಜಾಗತಿಕ ಮಟ್ಟದಲ್ಲಿ ಯೋಗ ಚಿಕಿತ್ಸೆಯಲ್ಲಿ ಹೆಸರು ತಂದ ತಮಗೆ ಅಭಿನಂದನೆಗಳು.***

**ಪ್ರಧಾನ ಸಂಪಾದಕ : ತಮ್ಮ ಬಾಲ್ಯ ಜೀವನ, ವಿದ್ಯಾಭ್ಯಾಸ ಹೇಗೆ ನಡೀತು ?**

**ಡಾ. ಆರ್.ಎನ್. ನಾಗರತ್ನ :** ನಮ್ಮದು ಸಂಪ್ರದಾಯಸ್ಥ ವಿಪ್ರ ಕುಟುಂಬ. ನಮ್ಮ ತಾಯಿ–ತಂದೆಯರಾದ ಶ್ರೀಮತಿ ಲಲಿತಮ್ಮ–ರಾಮಚಂದ್ರರಾವ್ ಅವರು ನಮ್ಮ ಸೋದರತ್ತೆ ಲಕ್ಷ್ಮೀ ಆಂಟಿ ಅವರು ನಮ್ಮ ಚಿಕ್ಕಪ್ಪ ಮಾನ್ಯ ಹೊ.ವೆ. ಶೇಷಾದ್ರಿ ಅವರು, ಡಾ. ಹೆಚ್.ಆರ್. ನಾಗೇಂದ್ರ, ಮೂರು ಜನ ತಂಗಿಯರಿಗೆ ಸಣ್ಣವಯಸ್ಸಿನಿಂದಲೇ ಉತ್ತಮ ಸಂಸ್ಕಾರವನ್ನು ಹೇಳಿಕೊಟ್ಟರು. ಮನೆಯಲ್ಲಿ ಸದಾ ಹಬ್ಬ–ಹರಿದಿನಗಳು ನಡೆಯುತ್ತಿದ್ದವು. ನಮ್ಮ ಕುಲದೇವತೆ ಶ್ರೀರಾಮ. ಆ ಕಾಲದಲ್ಲಿ ನಾವು ವಾಸವಾಗಿದ್ದ ಚಾಮರಾಜಪೇಟೆಯಲ್ಲಿ ಬರೀ ಬ್ರಾಹ್ಮಣರಿದ್ದು, ಹರಿಕಥೆ, ಭಜನೆಗಳು ಎಲ್ಲ ಕಡೆ ನಡೆಯುತ್ತಿದ್ದವು. ಸಮೀಪದಲ್ಲಿ ಇದ್ದ ಬಸವನಗುಡಿಯಲ್ಲಿ ಶ್ರೀರಾಮಕೃಷ್ಣಾಶ್ರಮವಿದ್ದು, ಅಲ್ಲಿಯ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆವು. ಆ ಆಶ್ರಮಕ್ಕೆ ದೇಶ–ವಿದೇಶಗಳಿಂದ ಸ್ವಾಮಿಗಳು–ಸನ್ಯಾಸಿಗಳು ಬಂದಾಗ ಉಪನ್ಯಾಸ ಕೇಳಿ ಅವರೊಂದಿಗೆ ಆಧ್ಯಾತ್ಮಿಕ ವಾದ–ಪ್ರತಿವಾದದಲ್ಲಿ ತೊಡುಗುತ್ತಿದ್ದೆವು. ಹೀಗೆ ನಮ್ಮ ಬಾಲ್ಯ, ಯೌವನ ಕಳೆಯಿತು. ನಮ್ಮಣ್ಣ ಎಚ್.ಆರ್. ನಾಗೇಂದ್ರ ಎಂಜಿನಿಯರ್ ಪದವಿ ಓದಲು ಹೋಗಿದ್ದರಿಂದ ಲಕ್ಷ್ಮೀ ಅಂಟಿ ನನಗೆ ಎಂಬಿಬಿಎಸ್ ಓದಲು ಸೂಚಿಸಿದರು. ನಾನು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಓದಿ, ಡಾಕ್ಟರಾಗಿ ನಂತರ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ, ಇಂಟರ್ನಲ್ ಮೆಡಿಸಿನ್‌ನಲ್ಲಿ ಎಂ.ಡಿ. ಮಾಡಿದೆ. ಆ ಸಮಯದಲ್ಲಿ ಲಕ್ಷ್ಮಿ ಆಂಟಿ ಅವರು ಮೈಸೂರಿಗೆ ಬಂದು ಮನೆ ಮಾಡಿ, ನಾನು, ನನ್ನ ತಂಗಿಯರು ಎಂಬಿಬಿಎಸ್ ಪೂರೈಸುವವರೆಗೂ ಅಲ್ಲೇ ಇದ್ದು ನೋಡಿಕೊಂಡರು. ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ವೈದ್ಯ ವೃತ್ತಿ ಆರಂಭಿಸಿದೆ. ಅ ಕಾಲೇಜಿನ ಹಲವಾರು ಸಹೋದ್ಯೋಗಿಗಳು ಎಂ.ಆರ್.ಸಿ.ಪಿ. ಪದವಿಗೆ ಇಂಗ್ಲೆಂಡಿನ ಎಡಿನ್‌ಬರ್ಗ್‌ಗೆ ಹೋದರು. ನಾನೂ ಹೋಗಿ ಸಹೋದ್ಯೋಗಿಗಳೊಂದಿಗೆ ಆ ಕೋರ್ಸ್‌ನಲ್ಲಿ ಪರಿಣಿತಿ ಪಡೆದೆ. ನಮಗೆ ಉತ್ತಮ ಆನ್‌ಲೈನ್ ಕ್ಲಾಸ್‌ಗಳು, ಪರಿಣಿತ ಪ್ರಾಧ್ಯಾಪಕರಿಂದ ಉತ್ತಮ ಉಪನ್ಯಾಸಗಳು ದೊರಕಿದವು. ಸದಾ ಕಂಬೈಂಡ್ ಸ್ಟಡಿ ಮಾಡುತ್ತಿದ್ದೆವು. ಕೇವಲ 10 ತಿಂಗಳಲ್ಲೆ ಎಂಆರ್‌ಸಿಪಿ ಪೂರೈಸಿ, ಬೆಂಗಳೂರಿಗೆ ಹಿಂತಿರುಗಿದೆ.

**ಡಾ. ಆರ್.ನಾಗರತ್ನ ಅವರೇ, ತಮಗೆ ಯೋಗದಲ್ಲಿ ಹೇಗೆ ಆಸಕ್ತಿ ಉಂಟಾಯಿತು?**

ಡಾ.ಆರ್. ಎನ್.: ಅಂದಿನ ದಿನಗಳಲ್ಲಿ ಶಾಲಾ–ಕಾಲೇಜುಗಳಲ್ಲಿ ಯೋಗವನ್ನು ಹೇಳಿಕೊಡುತ್ತಿದ್ದರು. ಯೋಗಪಟು ಡಾ. ಕೊಠಾರಿ, ಡಾ. ಬಿ.ಕೆ.ಎಸ್. ಅಯ್ಯಂಗಾರ್ ರವರಿಂದ ಯೋಗವನ್ನು ನಾವು

## ಡಾ. ಆರ್. ನಾಗರತ್ನ



ಶ್ರೀಮತಿ ಲಲಿತಾ–ರಾಮಚಂದ್ರರಾವ್ ಅವರ ಹಿರಿಯ ಮಗಳಾದ ಶ್ರೀಮತಿ ಆರ್. ನಾಗರತ್ನ ಅವರು ಬೆಂಗಳೂರಿನಲ್ಲಿ ಜನಿಸಿ, ಚಾಮರಾಜಪೇಟೆ ಸರ್ಕಾರಿ ಶಾಲೆಯಲ್ಲಿ 6ನೇ ತರಗತಿಯವರೆಗೆ, 7ರಿಂದ 10ನೇ ತರಗತಿಯವರೆಗೆ ಸಂತ ಥೆರೇಸಾ ಶಾಲೆಯಲ್ಲಿ ಓದಿ ನಂತರ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪದವಿಪೂರ್ವ ತರಗತಿಯಲ್ಲಿ, ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ನಂತರ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎರಡು ಚಿನ್ನದ ಪದಕಗಳೊಂದಿಗೆ ಎಂ.ಬಿ.ಬಿ.ಎಸ್. ಪದವಿಯನ್ನು, ಮೈಸೂರು ವೈದ್ಯಕೀಯ ಮಹಾವಿದ್ಯಾಲಯದಿಂದ ಇಂಟರ್‌ನಲ್ ಮೆಡಿಸನ್‌ನಲ್ಲಿ ಎಂ.ಡಿ. ಪದವಿಯನ್ನು ಪಡೆದು ನಂತರ ಇಂಗ್ಲೆಂಡಿನ ಎಡಿನ್‌ಬರ್ಗ್‌ನಲ್ಲಿ ಎಂ.ಆರ್.ಸಿ.ಪಿ. ಮತ್ತು ಎಫ್.ಆರ್.ಸಿ.ಪಿ. ಪದವಿಗಳನ್ನು ಕೇವಲ 10 ತಿಂಗಳಿನಲ್ಲಿ ಪಡೆದರು.

ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದಲ್ಲಿ ಮಾನ್ಯ ಏಕನಾಥ ರಾನಡೆಯವರ ಮಾರ್ಗದರ್ಶನದಲ್ಲಿ ಯೋಗ ಕಲಿತು, ತಮ್ಮ ಹಿರಿಯ ಸಹೋದರ ಡಾ. ಎಚ್.ಆರ್. ನಾಗೇಂದ್ರ ಸ್ಥಾಪಿಸಿದ ಬೆಂಗಳೂರಿನ ಜಿಗಣಿಯ ಸ್ವಾಮಿ ವಿವೇಕಾನಂದ ಯೋಗ ಸಂಸ್ಥಾನದಲ್ಲಿ (ವ್ಯಾಸ) ಯೋಗದ ಮೂಲಕ ಆಧುನಿಕ ಖಾಯಿಲೆಗಳಿಗೆ ಚಿಕಿತ್ಸೆ ಕಂಡು ಹಿಡಿದು ಸಾವಿರಾರು ಜನರಿಗೆ ಗುಣಪಡಿಸಿದ್ದಾರೆ. ವ್ಯಾಸವು 2002ರಲ್ಲಿ ವಿಶ್ವವಿದ್ಯಾಲಯವಾದ ನಂತರ ಅದರ ಆರೋಗ್ಯ ವಿಭಾಗದ ಕಾರ್ಯಾಧ್ಯಕ್ಷರು, ಆರೋಗ್ಯಧಾಮದ ವೈದ್ಯಕೀಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯೋಗಚಿಕಿತ್ಸೆಯಲ್ಲಿ ದೇಶದಲ್ಲಿ ಹರಿಕಾರರಾದ ಡಾ. ಆರ್. ನಾಗರತ್ನ ಅವರ 80ಕ್ಕೂ ಹೆಚ್ಚು ಸಂಶೋಧನ ಲೇಖನಗಳು ರಾಷ್ಟ್ರ, ಅಂತಾರಾಷ್ಟ್ರೀಯ ಸಂಶೋಧನ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಹಲವಾರು ಖಾಯಿಲೆ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ 11 ಪುಸ್ತಕಗಳನ್ನು ರಚಿಸಿದ್ದಾರೆ. ಅವರ ಈ ಆರೋಗ್ಯ ಸೇವೆ, ಜನಸೇವೆಗಳ ಫಲವಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2010), ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ, ಜಿ. ಕನ್ನಡ ದೂರದರ್ಶನ ವಾಹಿನಿಯ ಕರ್ನಾಟಕ ಶ್ರೇಷ್ಠ ವೈದ್ಯಕೀಯ ಸೇವಾ ಪ್ರಶಸ್ತಿ (2007), ಅಮೆರಿಕ ಮಧುಮೇಹತಜ್ಞರ ಸಂಘದ ಪ್ರತಿಷ್ಠಿತ ವಾರ್ಷಿಕ ಪ್ರಶಸ್ತಿ ಸಂದಿವೆ.

ಕಲಿತೆವು. ಪ್ರೊ. ಎ. ಸತ್ಯನಾರಾಯಣ ಶಾಸ್ತ್ರಿಯವರ ತತ್ವಶಾಸ್ತ್ರ ಉಪನ್ಯಾಸಗಳು ನಮಗೆ ಬಹಳ ಸಹಕಾರಿಯಾದವು. ಡಾ. ಹೆಚ್.ಆರ್. ನಾಗೇಂದ್ರ ಕೆನಡಾದ ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಮೆಕಾನಿಕಲ್ ಎಂಜನಿಯರಿಂಗ್‌ನಲ್ಲಿ ಪೋಸ್ಟ್ ಡಾಕ್ಟರೇಟ್ ಮಾಡಿ, ಭಾರತಕ್ಕೆ ಹಿಂದಿರುಗಿ ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದಲ್ಲಿ ಸೇವೆ ಮಾಡುತ್ತಿದ್ದರು. ಅವರ ಸಲಹೆ ಮೇರೆಗೆ ನಾನು ಅ ಕೇಂದ್ರಕ್ಕೆ ಹೋಗಿ ಮಾನ್ಯ ಏಕನಾಥ ರಾನಡೆಯವರ ಮಾರ್ಗದರ್ಶನದಲ್ಲಿ ಯೋಗದ ಹಲವು ಅಯಾಮಗಳನ್ನು ತಿಳಿದುಕೊಂಡೆನು. ಯೋಗದ ಮೂಲಕ ಹಲವಾರು ಆಧುನಿಕ ಖಾಯಿಲೆಗಳನ್ನು ಗುಣಪಡಿಸಬಹುದು ಎಂದು ತಿಳಿಯಿತು. ಮಾನ್ಯ ರಾನಡೆಯವರ ಸೂಚನೆ ಯೋಗವನ್ನು ದೇಶಾದ್ಯಂತ ಪರಿಚಯಿಸಲು ಆರಂಭಿಸುವ ಮೊದಲು ನಾನು ದೇಶದ ಹಲವಾರು ಆಶ್ರಮಗಳನ್ನು, ಯೋಗ ಚಿಕಿತ್ಸಾ ಕೇಂದ್ರಗಳನ್ನು ಭೇಟಿ ಮಾಡಿ ವೈದ್ಯರು, ಸ್ವಾಮಿಗಳೊಂದಿಗೆ ಚರ್ಚಿಸಿದೆ. 1979ರಿಂದ 1984ರವರೆಗೆ ನಿರಂತರವಾಗಿ ಯೋಗಚಿಕಿತ್ಸೆ ಶಿಬಿರಗಳನ್ನು ನಡೆಸಿ, ಬೆಂಗಳೂರಿನ ಅನೇಕಲ್ ತಾಲ್ಲೂಕಿನಲ್ಲಿರುವ ಜಿಗಣಿಯಲ್ಲಿ ವ್ಯಾಸ ಸಂಸ್ಥೆಯನ್ನು ಪ್ರಾರಂಭಿಸಿ ಸಂಪರ್ಕರಹಿತ ವ್ಯಾಧಿಗಳಾದ ಮಧುಮೇಹ, ಆಸ್ತಮಾ, ಕ್ಯಾನ್ಸರ್, ಬೊಜ್ಜುತನ, ಮಾನಸಿಕ ಒತ್ತಡ, ಹೃದಯ ರೋಗಗಳಿಗೆ ಪರ್ಯಾಯ ಯೋಗ ಪದ್ಧತಿಗಳ ಮೂಲಕ ಚಿಕಿತ್ಸೆ ನೀಡಿ ತಕ್ಕಮಟ್ಟಿಗೆ ಗುಣಪಡಿಸಬಹುದು ಎಂದು ಸಾಕ್ಷ್ಯಾಧಾರಗಳ ಮೂಲಕ ಸಂಶೋಧನೆ ಮಾಡಿದೆವು. ಅ ಸಮಯದಲ್ಲಿ, ರೋಗಪೀಡಿತರಿಂದ ಹಲವು ವಿಷಯಗಳನ್ನು ಅರಿತುಕೊಂಡೆವು. ಆ ಚಿಕಿತ್ಸಾ ಫಲಗಳನ್ನು ಸಂಶೋಧನ ಲೇಖನಗಳನ್ನಾಗಿ ಮಾಡಿದ್ದು ಹಲವಾರು ರಾಷ್ಟ್ರ, ಅಂತಾರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟವಾಗಿವೆ, ಯೋಗಕ್ಕೆ ವಿಶ್ವಮಾನ್ಯತೆ ತಂದುಕೊಟ್ಟಿವೆ.

**ಯೋಗದ ಮೂಲಕ ಆಧುನಿಕ ವ್ಯಾಧಿಗಳನ್ನು ಹೇಗೆ ಗುಣಪಡಿಸಬಹುದು ಎಂಬುದು ತಮಗೆ ತಿಳಿಯಿತು ?**

ಡಾ.ಆರ್.ಎನ್.: ಡಾ. ಎಚ್.ಆರ್. ನಾಗೇಂದ್ರ ಅವರಿಗೆ ಒಂದು ನೂತನ ವೈಜ್ಞಾನಿಕ ವಿಚಾರ ಹೊಳೆಯಿತು. ಆಧುನಿಕ ಆಲೋಪತಿ ಪದ್ಧತಿಯಲ್ಲಿ ವೈದ್ಯರು ಕೇವಲ ದೇಹಮಟ್ಟದಲ್ಲಿ ಚಿಕಿತ್ಸೆ ನೀಡುತ್ತಿದ್ದರೇ ಹೊರತು ಮನಸ್ಸಿನ ಮಟ್ಟದಲ್ಲಿ ಅಲ್ಲ. ಯೋಗದ ಮೂಲಕ ಮಾನಸಿಕ, ಭಾವನಾತ್ಮಕ ಸ್ತರದಲ್ಲಿ ಖಾಯಿಲೆಗಳನ್ನು ಗುಣಪಡಿಸಬಹುದು, ಇದು ನಮ್ಮ ದೇಶದ ಋಷಿಮುನಿಗಳ ಕೊಡುಗೆ. ಯೋಗವಾಸಿಷ್ಠ, ಪತಂಜಲಿ ಯೋಗ ಸೂತ್ರಗಳು, ಹಠಯೋಗಪ್ರದೀಪಿಕಾ, ಭಗವದ್ಗೀತೆ, ಉಪನಿಷತ್‌ಗಳು ಮುಂತಾದ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಯೋಗಚಿಕಿತ್ಸೆ, ಮನಸ್ಸಿನ ಹಲವು ಆಯಾಮಗಳ ಬಗ್ಗೆ ಸಂಶೋಧನೆ ಮಾಡಿ ವ್ಯಾಧಿಗಳು ಮೊದಲಿಗೆ ಮನಸ್ಸಿನಲ್ಲಿ ಆರಂಭವಾಗಿ ನಂತರ ದೈಹಿಕವಾಗಿ ಪರಿವರ್ತನೆ ಹೊಂದುತ್ತವೆ. ಆ ಮಟ್ಟದಲ್ಲೇ ನಿಯಂತ್ರಿಸಬೇಕು ಎಂದು ಅರಿತೆವು. ಹೀಗೆ ಮಾಡಲು ಒಂದು ನಮೂನೆ ಅಥವಾ ಮಾದರಿ, ಶಿಷ್ಟಾಚಾರ ಇರಲಿಲ್ಲ. ಅದನ್ನು ಪರಿಣಿತರೊಂದಿಗೆ ಚರ್ಚಿಸಿ ಸಿದ್ಧಪಡಿಸಿ, ದೇಶಾದ್ಯಂತ, ವಿಶ್ವಾದ್ಯಂತ ಪ್ರಚುರಗೊಳಿಸಿದೆವು. ಮೊದಲಿಗೆ ರೋಗಪೀಡಿತರು ತೆಗೆದುಕೊಳ್ಳುವ ಆಧುನಿಕ ಔಷಧಿಗಳ ಜೊತೆಗೆ ನಿಧಾನವಾಗಿ ಯೋಗವನ್ನು ಜೋಡಿಸಿದೆವು. ರೋಗಿಗಳಿಗೆ ವಿಶ್ವಾಸ ಬಂದ ನಂತರ ಆಧುನಿಕ ಔಷಧಿಗಳ ಪ್ರಮಾಣವನ್ನು ಕಡಿಮೆ ಮಾಡಿ, ಕೊನೆಗೆ ಕೇವಲ ಯೋಗ ಚಿಕಿತ್ಸಾ ಪದ್ಧತಿಯನ್ನು ಅವರು ಅಳವಡಿಸಿಕೊಳ್ಳಲು ಸೂಚಿಸಿ ಅದು ಯಶಸ್ವಿಯಾಗಿದೆ. ನಮ್ಮ ವ್ಯಾಸ ವಿಶ್ವವಿದ್ಯಾಲಯದ ಆರೋಗ್ಯಧಾಮ ವಿಭಾಗದಲ್ಲಿ ಇಂದಿಗೂ ಇಂತಹ ಪ್ರಯೋಗಗಳು ನಡೆಯುತ್ತಿವೆ. ಸಫಲವಾಗಿವೆ.

**ಕೇಂದ್ರ ಸರ್ಕಾರದ ನಿಯಂತ್ರಿತ ಮಧುಮೇಹ ಭಾರತ ಯೋಜನೆಯಲ್ಲಿ ತಮ್ಮ ಪಾತ್ರವೇನು ?**

ಡಾ.ಆರ್.ಎನ್.: ನಮ್ಮ ದೇಶದ ಪ್ರಧಾನಮಂತ್ರಿಗಳಾದ ಮಾನ್ಯ ಶ್ರೀ ನರೇಂದ್ರ ಮೋದೀಜಿಯವರು 2015ರಲ್ಲಿ ಮೊದಲ ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲು ಕರೆ ನೀಡಿದ ಸಮಯದಲ್ಲಿ ದೇಶಾದ್ಯಂತ ನಾಗರಿಕರಲ್ಲಿ ಹೆಚ್ಚುತ್ತಿರುವ ಮಧುಮೇಹದ ಬಗ್ಗೆ ತಿಳಿದು ನಿಯಂತ್ರಿತ ಮಧುಮೇಹ ಭಾರತ ಯೋಜನೆಯನ್ನು ಘೋಷಿಸಿ, ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯವು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಎಸ್.ವ್ಯಾಸ ವಿಶ್ವವಿದ್ಯಾಲಯಕ್ಕೆ ಅಪೂರ್ವ ಅವಕಾಶ ನೀಡಿದರು. ಆ ಯೋಜನೆಯಡಿ ನಾವು ದೇಶಾದ್ಯಂತ 35 ಹಿರಿಯ ಸಂಶೋಧಕರು, 1200 ಸ್ವಯಂಸೇವಕರೊಂದಿಗೆ, 29 ರಾಜ್ಯಗಳ, 60 ಜಿಲ್ಲೆಗಳ, 2 ಲಕ್ಷ 40 ಸಾವಿರ ನಾಗರಿಕರನ್ನು, ಮಧುಮೇಹಿಗಳನ್ನು ಖುದ್ದಾಗಿ ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, ದಾಖಲಾತಿ ಮಾಡಿದ್ದೇವೆ. ಅದೊಂದು ದೋಷಪೂರ್ಣ ಜೀವನಶೈಲಿಯಿಂದ ಉಂಟಾದದ್ದು ಎಂಬುದನ್ನು ಪುರಾವೆಗಳ ಮೂಲಕ ತಿಳಿದು, ಮಾನಸಿಕ ಸ್ತರದಲ್ಲಿ ಅದನ್ನು ನಿವಾರಿಸಬಹುದು, ಯೋಗ ಚಿಕಿತ್ಸೆ ಪದ್ಧತಿಯೇ ಅದಕ್ಕೆ ರಾಮಬಾಣ ಎಂದು ಅರಿತು ಸೂರ್ಯನಮಸ್ಕಾರ, ಡಾ. ಎಚ್. ಆರ್.ಎನ್. ಅವರ ಪ್ರಾಣಾಯಾಮ, ಆವರ್ತನಧ್ಯಾನದ ಮೂಲಕ ಸಾವಿರಾರು ಜನರಿಗೆ ಚಿಕಿತ್ಸೆ ನೀಡಿದ್ದು, ಅದು ಫಲಕಾರಿಯಾಗಿದೆ.

**ಜಾಗತಿಕ ಮಟ್ಟದ ಆಧುನಿಕ ವೈದ್ಯೆಯಾದ ತಾವು, ಯೋಗ ಚಿಕಿತ್ಸಾ ಪದ್ಧತಿಯಲ್ಲಿ ಮಂಚೂಣಿಯಲ್ಲಿರುವ ತಾವು ಇಂದಿನ ಯುವ ಪೀಳಿಗೆಗೆ, ಯುವ ವೈದ್ಯರಿಗೆ ನೀಡುವ ಸಂದೇಶವೇನು?**

ಡಾ.ಆರ್.ಎನ್.: ಯುವ ವೈದ್ಯರಿಗೆ ಆಯ್ಕೆ ಇಲ್ಲ. ರೋಗಿಗಳ ಪರೀಕ್ಷೆ ಮಾಡುವುದು ಪ್ರಿಸ್‌ಕ್ರಿಪ್‌ಷನ್ ಬರೆಯುವ ಕಾಲ ಮುಗಿದಿದೆ. ಮೊದಲಿಗೆ ಯುವ ವೈದ್ಯರು ತಮ್ಮ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳಬೇಕು. ರೋಗಿಗಳೊಂದಿಗೆ ಮಾತನಾಡಬೇಕು, ಜೀವನಶೈಲಿ ಬದಲಾಯಿಸಿಕೊಳ್ಳಲು ಪ್ರೇರೇಪಿಸಬೇಕು. ಯೋಗ, ಆಯುರ್ವೇದ ವಿಷಯಗಳನ್ನು ತಿಳಿದು ತಾವು ಜೀವನದಲ್ಲಿ ಜಾರಿಗೊಳಿಸಬೇಕು. ಯುವಕ–ಯುವತಿಯರು ಮೊದಲು ಕಂಪ್ಯೂಟರ್, ಮೊಬೈಲ್ ಸ್ಕ್ರೀನ್ ಅಡಿಕ್ಷನ್ನಿಂದ ಹೊರಬರಬೇಕು. ಪ್ರತಿನಿತ್ಯ ಬೇಗ ಮಲಗಿ, ಬೇಗ ಎದ್ದು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಬೇಕು. ಜಂಕ್ ಆಹಾರ ತಿನ್ನುವುದನ್ನು ನಿಲ್ಲಿಸಿ, ಮನೆಯಲ್ಲಿಯೇ ಶುಚಿ–ರುಚಿಯಾದ ಸಸ್ಯ ಆಹಾರವನ್ನು ತಯಾರಿಸಿ ಸೂಕ್ತ ಕಾಲದಲ್ಲಿ ಸೇವಿಸಬೇಕು. ರಾಜ್ಯ–ಕೇಂದ್ರ ಸರ್ಕಾರಗಳು ಆಧುನಿಕ ಮೆಡಿಕಲ್ ಕಾಲೇಜುಗಳ ಪಠ್ಯಕ್ರಮದಲ್ಲಿ ಯೋಗ, ಆಯುರ್ವೇದದ ಬಗ್ಗೆ ಮಾಹಿತಿ ನೀಡಬೇಕು. ಸಮಗ್ರ ವೈದ್ಯಕೀಯ ಪದ್ಧತಿಯನ್ನು ಜಾರಿಗೊಳಿಸಬೇಕು. ಐಟಿ–ಬಿಟಿ ವೃತ್ತಿಪರರು, ವರ್ಕ್ ಫ್ರಂ ಹೋಮ್ ಮಾಡುತ್ತಾ, ಜೀವನ ವಿಧಾನ ಪದ್ಧತಿ ಅಳವಡಿಸಿಕೊಂಡಿರುವುದನ್ನು ತ್ಯಜಿಸಬೇಕು. ಶರೀರ ದೃಢತೆಗೆ ಕೆಲವು ಆಸನಗಳು, ಸೂರ್ಯ ನಮಸ್ಕಾರ, ಪ್ರಾಣಾಯಾಮ, ಮನಸ್ಸಿನ ಒತ್ತಡ ನಿವಾರಣೆಗೆ ಧ್ಯಾನ ಮಾಡುವುದರಿಂದ ಜೀವನ ಪೂರ್ತಿ ಆರೋಗ್ಯವಂತರಾಗಿರಬಹುದು.

**ತಮ್ಮ ಐದು ದಶಕಗಳ ವೈದ್ಯ ಸೇವೆ, ಸಾಮಾಜಿಕ ಸೇವೆ, ಆಧ್ಯಾತ್ಮಿಕ ಸೇವೆ, ತ್ಯಾಗದ ಫಲವಾಗಿ ಹಲವಾರು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಪ್ರಸಸ್ತಿಗಳು ಸಂದಿವೆ. ಅವನ್ನು ಪಡೆದ ತಮಗೆ ಹೇಗೆ ಅನ್ನಿಸಿತು?**

ಡಾ.ಆರ್.ಎನ್.: ಎಲ್ಲವೂ ಭಗವಂತನ ಕೃಪೆ, ಗುರುಗಳ ಕೃಪೆ ಅವೆಲ್ಲವನ್ನು ಅವರಿಗೆ ಸಮರ್ಪಿಸಿದ್ದೇನೆ.

# ಮೈಸೂರು ತಾತಯ್ಯ

**– ಸುರೇಶ ಮೂನ**



ಬೆಂಗಳೂರು ನಗರವನ್ನು ಹೇಗೆ ಸಮಾಜದ ಅನೇಕ ಹಿತಚಿಂತಕರು ತಮ್ಮ ತನುಮನಧನವನ್ನು ಅರ್ಪಿಸಿ ಅದರ ಬೆಳವಣಿಗೆಗೆ ಕಾರಣರಾಗಿದ್ದಾರೋ ಹಾಗೆಯೇ ಮೈಸೂರು ನಗರದಲ್ಲೂ ಕೆಲವು ಮಹನೀಯರು ಆ ನಗರದ ಸರ್ವತೋಮುಖ ಬೆಳವಣಿಗೆಗೆ ತಮ್ಮ ಅಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ. ಅಂತಹ ಕೆಲವು ಅಪರೂಪದ ಮಹಾಪುರುಷರ ಪೈಕಿ ಮೈಸೂರು ತಾತಯ್ಯ ಪ್ರಮುಖರು. ಅವರ ಹೆಸರಿನೊಂದಿಗೆ ಮೈಸೂರು ಎಂಬ ಪದವು ಸೇರಿಕೊಂಡಿದೆ ಎಂದರೆ ಆ ನಗರಕ್ಕೆ ಅವರಿಂದ ಸಂದಿರುವ ಸೇವೆಯ ಪ್ರಮಾಣದ ಅರಿವಾಗುತ್ತದೆ. ತಾತಯ್ಯನವರ ಬಗ್ಗೆ ಅವರದ್ದೇ ಆತ್ಮಕಥೆ, ಸ್ಮರಣ ಸಂಚಿಕೆಗಳು ತಾಯಿನಾಡು ಪತ್ರಿಕೆಯ ಸಂಪಾದಕರಾಗಿದ್ದ ಪಿ.ಆರ್. ರಾಮಯ್ಯ, ಹುರುಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ, ಡಾ. ಓ ವಿ ವೆಂಕಟಾಚಲಶಾಸ್ತ್ರೀ ಮುಂತಾದ ಹಿರಿಯರು ರಚಿಸಿರುವ ಜೀವನಚರಿತ್ರೆಯ ಪುಸ್ತಕಗಳು ಸೇರಿದಂತೆ ಸುಮಾರು ಎಂಟಕ್ಕೂ ಹೆಚ್ಚು ಪರಿಚಯಾತ್ಮಕ ಕೃತಿಗಳು ಪ್ರಕಟವಾಗಿವೆ. ತಾತಯ್ಯನವರ ಹೆಸರನ್ನು ಹೇಳುವ ಕೆಲವು ರಚನೆಗಳು, ಸಂಘಸಂಸ್ಥೆಗಳು ಮೈಸೂರಿನಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿವೆ.

ನನ್ನ ಅಧ್ಯಯನಕ್ಕಾಗಿ ಇವರ ಬಗ್ಗೆ ಪುಸ್ತಕಗಳನ್ನು ಒದಗಿಸಿ ನೆರವಾದವರು ಶ್ರೀರಾಮಚಂದ್ರ ಹೆಗಡೆ. ಅವರಿಗೆ ನನ್ನ ಕೃತಜ್ಞತೆಗಳು, ಇವರು ಮತ್ತು ಇವರ ಸಮಾನಮನಸ್ಕ ಸ್ನೇಹಿತರ ತಂಡಕ್ಕೆ ತಾತಯ್ಯನವರ ಬಗ್ಗೆ ಅಪಾರವಾದ ಅಭಿಮಾನ ಮತ್ತು ಗೌರವ. ಇಂತಹ ಮಹಾ ಮಹಿಮರ ಜೀವನ ಮತ್ತು ಸಾಧನೆಗಳು ಸಾರ್ವಜನಿಕವಾಗಿ ಪ್ರಕಟಗೊಳ್ಳಬೇಕು, ಆಗಲೇ ಮುಂದಿನ ಪೀಳಿಗೆಗೂ ತಮ್ಮ ಪೂರ್ವಜರ ಹಿರಿಮೆ-ಗರಿಮೆಗಳ ಪರಿಚಯವಾಗುತ್ತದೆ. ಮೈಸೂರು ತಾತಯ್ಯ ಮೈಸೂರು ನಗರವಷ್ಟೆ ಅಲ್ಲ ಇತರರು ಮರೆಯಲೇಬಾರದು. ಒಬ್ಬ ಮಹಾನ್ಸಮಾಜ ಸುಧಾರಕರು ಎಂಬ ಉದ್ದೇಶದಿಂದ ಹಲವಾರು ರಚನಾತ್ಮಕ ಯೋಜನೆಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಅವುಗಳ ಪೈಕಿ ತಾತಯ್ಯನವರ ಬಗ್ಗೆ ವೆಬ್ಸೈಟ್ ರಚನೆಯೂ ಒಂದು http://mysorethathayya.org ಇದನ್ನು ಪ್ರವೇಶಿಸಿದರೆ ತಾತಯ್ಯನವರ ಬಗ್ಗೆ ವ್ಯವಸ್ಥಿತವಾದ ಪರಿಚಯ ದೊರಕುತ್ತದೆ.

ಮೈಸೂರು ತಾತಯ್ಯನವರ ಹೆಸರು ಎಂ.ವೆಂಕಟಕೃಷ್ಣಯ್ಯ. ಇವರು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಗೆ ಸೇರಿದ ಮಗ್ಗೆ ಎಂಬ ಗ್ರಾಮದಲ್ಲಿ 1844 ನೇ ಆಗಸ್ಟ್ 20ನೇ ತಾರೀಖಿನಂದು ಜನಿಸಿದರು. ತಂದೆ ಸುಬ್ಬಯ್ಯ ಸ್ಮಾರ್ತ ಸಂಪ್ರದಾಯಕ್ಕೆ ಸೇರಿದವರು. ವೇದಾಧ್ಯಯನಸಂಪನ್ನರು, ಕೃಷಿಕರು.ತಾಯಿ ಭಾಗೀರಥಮ್ಮ ಮೈಸೂರು ಆಸ್ಥಾನ ಪಂಡಿತರಾಗಿದ್ದ ಅಷ್ಟಪದಿ ರಾಮಾಶಾಸ್ತ್ರಿಗಳ ಮಗಳು. ವೈದಿಕಮನೆತನ, ಸಂಪ್ರದಾಯಸ್ಥ ಗೃಹಿಣಿ.

ಅದೇ ಊರಿನಲ್ಲಿ ಆಗ ಅರುಣಾಚಲ ಶಾಸ್ತ್ರಿಗಳು ಎಂಬ ಪಂಡಿತರಿದ್ದರು. ಅವರು ಅನೇಕ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ಪ್ರತಿ ನಿತ್ಯ ಸಂಜೆ ವೇಳೆ ಊರಿನ ಜನರಿಗೆ ಪುಣ್ಯ ಕಥೆಗಳನ್ನು ಹೇಳುತ್ತಿದ್ದರು. ಸುಬ್ಬಯ್ಯನವರು ಮತ್ತ ಅವರ ಮಕ್ಕಳು ಇವರ ಪ್ರವಚನಗಳಿಂದ ಪ್ರಭಾವಿತರಾಗಿದ್ದರು. ಹೀಗೆ ಮನೆ ಮತ್ತು ಹೊರಗಿನ ವಾತಾವರಣ ತಾತಯ್ಯನವರಲ್ಲಿ ಚಿಕ್ಕಂದಿನಲ್ಲಿಯೇ ಉತ್ತಮ ಸಂಸ್ಕಾರಗಳು ರೂಪುಗೊಳ್ಳಲು ಕಾರಣವಾದವು.

ಭಾಗೀರಥಮ್ಮನವರು ಆಗಾಗ ತಮ್ಮ ಪತಿಯಲ್ಲಿ ನಾವು ಮೈಸೂರಿಗೆ ಹೋಗೋಣ ಅಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದರು. ಆದರೆ ಸುಬ್ಬಯ್ಯನವರು ಅದಕ್ಕೆ ಗಮನಕೊಟ್ಟಿರಲಿಲ್ಲ. ವೆಂಕಟಕೃಷ್ಣಯ್ಯನವರು ಹುಟ್ಟಿದ ಸುಮಾರು ಹತ್ತು ವರ್ಷಗಳು ಆಗುತ್ತಿದ್ದಂತೆ ಸುಬ್ಬಯ್ಯನವರು ದೈವಾಧೀನರಾದರು. ಅವರ ನಿಧನದ ನಂತರ ಭಾಗೀರಥಮ್ಮನವರು ತಮ್ಮ ನಾಲ್ಕು ಮಕ್ಕಳೊಂದಿಗೆ ಮೈಸೂರಿಗೆ ಬಂದರು. ಅಲ್ಲಿ ಭಾಗವತ ಸುಬ್ಬರಾಯರು ಎಂಬ ಪುಣ್ಯಾತ್ಮರು ಇವರಿಗೆ ವಾಸಿಸಲು ಒಂದು ಮನೆಯನ್ನು ಒದಗಿಸಿಕೊಟ್ಟರು. ಅವರೇ ವೆಂಕಟಕೃಷ್ಣಯ್ಯನವರ ಉಪನಯನವನ್ನು ನೆರವೇರಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಿದರು, ಆದರೂ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಇವರಿಗೆ ಆಗಲೇ ಇಲ್ಲ. ಮೈಸೂರಿನ ಮರಿಮಲ್ಲಪ್ಪನವರ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿ ದೊರಕಿತು. ಇದರ ಜೊತೆಗೆ ಅವರು ತಮ್ಮನ್ನು ಸಾರ್ವಜನಿಕ ಸೇವಾರಂಗದಲ್ಲಿಯೂ ಉತ್ಸಾಹದಿಂದ ತೊಡಗಿಸಿಕೊಂಡರು.

ವೆಂಕಟಕೃಷ್ಣಯ್ಯನವರು ಬಹುಶ್ರುತ ಪಾಂಡಿತ್ಯ. ಬಹುಮುಖ ವ್ಯಕ್ತಿತ್ವ. ಇವು ಮೈಸೂರು ನಗರ ಮತ್ತು ಸಂಸ್ಥಾನದ ಸರ್ವತೋಮುಖ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣವಾದವು. ಈ ನಾಡಿನ ಜನಸಾಮಾನ್ಯರಲ್ಲಿ ಅದರಲ್ಲೂ ವಿದ್ಯಾವಂತರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಬಗ್ಗೆ ಅರಿವನ್ನು ಮೂಡಿಸಿದರು. ಆದರೆ ಅದಕ್ಕಾಗಿ ಅವರು ಪಟ್ಟ ಕಷ್ಟ-ನಷ್ಟಗಳು ಅಷ್ಟಿಷ್ಟಲ್ಲ. ತಮ್ಮ ಸರ್ವಸ್ವವನ್ನು ಇದಕ್ಕಾಗಿ ಅರ್ಪಿಸಿಬಿಟ್ಟಿದ್ದರು. ಅದರ ಜೊತೆಗೆ ವೈಯಕ್ತಿಕ ಜೀವನದ ವಿಪರೀತವಾದ ಏರು-ಪೇರುಗಳು ಅವರಿಗೆ ಅಡ್ಡಿ-ಆತಂಕಗಳನ್ನು ಒಡ್ಡುತ್ತಲೇ ಇದ್ದವು. ಆದರೆ ಅವೆಲ್ಲವನ್ನು ಮೆಟ್ಟಿ ನಿಂತು ಸಮಾಜದ ಬೆಳವಣಿಗೆಯಲ್ಲಿ ತಮ್ಮನ್ನು ತಾವು ಮರೆತರು.

ಇವರ ಸಾಧನೆಗಳು ದೊಡ್ಡ ಪಟ್ಟಿಯನ್ನು ನೋಡಿದರೆ ಒಬ್ಬ

ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ತನ್ನ ಸಮಾಜಕ್ಕೆ ಕೊಡುಗೆಯನ್ನು ಕೊಡಲು ಸಾಧ್ಯವೇ ಎಂದು ಅಚ್ಚರಿ ಪಡುವಂತಾಗುತ್ತದೆ.

ಇವರು ಕಟ್ಟಿ ಬೆಳೆಸಿ ಸಂಘ ಸಂಸ್ಥೆಗಳು ಹಲವಾರು. ಅವರ ನಂತರವೂ ಈ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಬೆಳೆದು ಸಮಾಜಕ್ಕೆ ಅನುಕೂಲಕರವಾಗಿವೆ, ಮರಿಮಲ್ಲಪ್ಪ ಶಾಲೆ, ಶಾರದಾ ವಿಲಾಸ ಹೈಸ್ಕೂಲು, (ಈ ಅಂಕಣದ ಬರಹಗಾರನಾದ ನಾನು, ಸುರೇಶ ಮೂನ ಇದೇ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಸಿದ್ದೇನೆ ಎಂಬುದು ನನಗೆ ಹೆಮ್ಮೆಯ ಸಂಗತಿ) ಸದ್ವಿದ್ಯಾ ಪಾಠಶಾಲೆ, ಮಹಾರಾಣಿ ಬಾಲಿಕಾ ಪಾಠಶಾಲೆ, ಪಂಚಮ ಕೈಗಾರಿಕಾ ಪಾಠಶಾಲೆ, ಎಜುಕೇಶನ್ಲೀಗ್, ಹಿಂದೂಮಿಷನ್, ವಿಧವೆಯರಿಗಾಗಿ ವೊಕೇಷನಲ್ ಇನ್ಸಿಟ್ಯೂಟ್, ಅನಾಥಾಲಯ, ಬ್ರಾಹ್ಮಣ ವಿದ್ಯಾರ್ಥಿ ಸಂಘ, ಬ್ರಾಹ್ಮಣ ಧರ್ಮ ಸಹಾಯ ಸಭಾ, ಪತ್ರಿಕೋದ್ಯಮಗಳ ಸಂಘ, ವೆಲನಾಡು ಮಹಾಸಭೆ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ನಮ್ಮ ನಾಡಿನ ಪ್ರತಿಷ್ಠಿತ ಸಂಘ–ಸಂಸ್ಥೆಗಳ ಆರಂಭ ಮತ್ತು ಬೆಳವಣಿಗೆಗೆ ಇವರ ಕೊಡುಗೆ ಅಮೋಘ ಮತ್ತು ಅಮೂಲ್ಯ. ಇವರು 1895 ರಲ್ಲಿ ಪ್ರಾರಂಭಿಸಿದ ಅನಾಥಾಲಯ ಮಹಾರಾಣಿ ವಾಣಿವಿಲಾಸ ಸನ್ನಿಧಾನದವರಿಂದ ಉದ್ಘಾಟಿಸಲ್ಪಟ್ಟಿತು. ಈ ಸಂಸ್ಥೆ ಎಷ್ಟು ಪ್ರಸಿದ್ಧವಾಗಿತ್ತು ಎಂದರೆ 1927ರಲ್ಲಿ ಗಾಂಧೀಜಿಯವರು ಮೈಸೂರಿಗೆ ಬಂದಿದ್ದಾಗ ಇವರನ್ನು ಕಂಡು ಅನಾಥಾಲಯಕ್ಕೆ ಭೇಟಿನೀಡಿ ಅಲ್ಲಿನ ಕಾರ್ಯ ನಿರ್ವಹಣೆಯ ಬಗ್ಗೆ ಮೆಚ್ಚುಗೆ ಸೂಚಿಸಿದ್ದರು.

ನಮ್ಮ ನಾಡಿನ ಪತ್ರಿಕಾ ರಂಗದ ಬೆಳವಣಿಗೆಯಲ್ಲಿ ಇವರು ವಹಿಸಿರುವ ಪಾತ್ರ ಬಹಳ ಮುಖ್ಯವಾದದ್ದು. ಹಿತಬೋಧಿನಿ, ವಿದ್ಯಾದಾಯಿನಿ, ವೃತ್ತಾಂತಚಿಂತಾಮಣಿ, ಸಾಧ್ವಿ, ಮೈಸೂರು ಪೇಟ್ರಿಯಾಟ್, ವೆಲ್ತ್ ಆಫ್ ಮೈಸೂರ್, ನೇಚರ್‌ಕ್ಯೂರ್, ಮುಂತಾದ ಪತ್ರಿಕೆಗಳನ್ನು ಆರಂಭಿಸಿ ನಡೆಸಿದರು. ಇವೆಲ್ಲವೂ ಆಗಿನ ಕಾಲಕ್ಕೆ ಜನಪ್ರಿಯವಾಗಿದ್ದವು. ಪ್ರತಿ ದಿನ ಸಂಜೆ ಹೊರಬರುತ್ತಿದ್ದ ಏಕ ಪುಟ ಪತ್ರಿಕೆ ಸಾಧ್ವಿಯನ್ನು ವಿದ್ಯಾರ್ಥಿಗಳಾಗಿದ್ದ ನಾವೆಲ್ಲರೂ ಬಹಳ ಆಸಕ್ತಿಯಿಂದ ಓದುತ್ತಿದ್ದೆವು.

ಚೋರ ಗ್ರಹಣ ಗ್ರಂಥ, ವಿದ್ಯಾರ್ಥಿ ಕರಭೂಷಣ, ಬೂಕಟಿರ್ ವಾಷಿಂಗ್ಟನ್, ಟೆಲ್ಮಾಕಟಿನ್ ಸಾಹಸ ಕೃತಿಗಳು, ಪರಂತಪ ವಿಜಯ ಮುಂತಾದವುಗಳು ಇವರು ರಚಿಸಿದ ಗ್ರಂಥಗಳು. ಇವರ ವೈವಿಧ್ಯಮಯ ಸಾಹಿತ್ಯ ಸೇವೆಯನ್ನು ಗಮನಿಸಿ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು 1922ರಲ್ಲಿ ದಾವಣಗೆರೆಯಲ್ಲಿ ನಡೆದ ಎಂಟನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿತು. ಅವರು ನಾಲಕ್ಕುವರೆ ಪುಟಗಳಲ್ಲೇ ಭಾಷಣವನ್ನು ಮುಗಿಸಿದ್ದರೂ ಮೈಸೂರಿನಲ್ಲಿ ಭಾಷೆ ಸಾಹಿತ್ಯಗಳಿಗೆ ನವೋದಯ ಪೂರ್ವ ಕಾಲದಲ್ಲಿ ದೊರೆತ ಪ್ರೋತ್ಸಾಹದ ಬಗ್ಗೆ ಎಲ್ಲರ ಗಮನ ಸೆಳೆದಿದ್ದರು.

ಇನ್ನು, ರಾಜಕೀಯ ಕ್ಷೇತ್ರವನ್ನು ತೆಗೆದುಕೊಂಡರೆ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆ, ಮುನ್ಸಿಪಲ್ಕೌನ್ಸಿಲ್, ಎಕನಾಮಿಕ್ಕಾನ್ಫರೆನ್ಸ್ಸಿಸ್ಟ್ರಿಕ್ಟ್‌ಬೋರ್ಡ್ಮುಂತಾದ ಕಡೆಗಳಲ್ಲೆಲ್ಲ ಇವರು ಉಪಸ್ಥಿತಿ, ಸಲಹೆ, ಸಹಕಾರ ಮತ್ತು ಅಭಿಪ್ರಾಯಗಳನ್ನು ಸರ್ಕಾರ ಗೌರವದಿಂದ ಪರಿಗಣಿಸುತ್ತಿದ್ದ ಬಗ್ಗೆ ಡಾ. ಡಿ.ವಿ.ಜಿ.ಯವರು ತಮ್ಮ ಗ್ರಂಥದಲ್ಲಿ ವಿವರವಾಗಿ ಬರೆದಿದ್ದಾರೆ.

ಮೈಸೂರು ಸಂಸ್ಥಾನದ ಪ್ರಥಮ ದಿವಾನರಾದ ಶ್ರೀರಂಗಾಚಾರ್ಲು ಅವರಿಂದ ಪ್ರಾರಂಭವಾಗಿ ಹತ್ತನೇ ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್ ಅವರವರೆಗೂ ಇವರು ಎಲ್ಲರನ್ನೂ ಹತ್ತಿರದಿಂದ ಬಲ್ಲವರಾಗಿದ್ದರು. ಸರ್. ಎಂ. ವಿಶ್ವೇಶ್ವರಯ್ಯನವರು ಇವರನ್ನು ಭೀಷ್ಮನಂತೆ ಗೌರವಿಸುತ್ತಿದ್ದರು.

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಇವರು ಪತ್ರಿಕಾ ಲೇಖನಗಳ ಮೂಲಕ ಹೋರಾಟ ನಡೆಸಿದರು. ತಮ್ಮ ಬರಹಗಳಲ್ಲಿ ನೇರವಾಗಿಯೂ ನಿಷ್ಠುರವಾಗಿಯೇ ಖಚಿತವಾದ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದರು. ಯಾರ ಮುಲಾಜಿಗೂ ಒಳಗಾಗುತ್ತಿರಲಿಲ್ಲ. ಮೈಸೂರು ಕಾಂಗ್ರೆಸ್ ಸ್ಥಾಪಕರಲ್ಲಿ ಇವರೂ ಒಬ್ಬರಾಗಿದ್ದರು.

ಒಟ್ಟಿನಲ್ಲಿ ಮೈಸೂರು ತಾತಯ್ಯ, ದಯಾಸಾಗರ, ಜಾಗೃತಿಯ ಹರಿಕಾರ ಎಂದೆಲ್ಲಾ ಪ್ರಸಿದ್ಧರಾದ ಎಂದಿಗೂ ಮರೆಯಲೇ ಬಾರದ ಈ ಮಹಾನುಭಾವರು 1933ರ ನವೆಂಬರ್ 8 ರಂದು ದೈವಾಧೀನರಾದರು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು–70.**

**ದೂರವಾಣಿ : 080–26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ಸುಬ್ರಮಣ್ಯ ಭಾರತೀ

**– ಭಯಾಪತಿ,**
ಉಪಾಧ್ಯಕ್ಷರು, ಅಖಿಲ ಕರ್ನಾಟಕ ಮಹಾಸಭಾ

**ಸುಬ್ರಮಣ್ಯಭಾರತಿಯವರು ಅಕ್ಷರಗಳ ಮೂಲಕವೇ ಸ್ವಾತಂತ್ರ್ಯದ ಕಿಚ್ಚನ್ನು ಬಡಿದೆಬ್ಬಿಸಿ ಜನರಲ್ಲಿ ಸ್ವಾತಂತ್ರ್ಯಪ್ರಜ್ಞೆ ಮೂಡಿಸಿದ ಮಹಾನ್ ದೇಶಪ್ರೇಮಿ.**



ಸುಬ್ರಹ್ಮಣ್ಯಭಾರತಿ ಇದು ಎಲ್ಲಾ ಸ್ವಾತಂತ್ರ್ಯಪ್ರಿಯ ಭಾರತೀಯರಿಗೂ ಚಿರಪರಿಚಿತವಾದ ಹೆಸರು.

ಸ್ವಾತಂತ್ರ ಹೋರಾಟಗಾರ, ಕವಿ,ಸಂಪಾದಕ, ಸಾಮಾಜಿಕ ಹೋರಾಟಗಾರ,ಮಹಿಳಾ ಹಕ್ಕುಗಳ ಹೋರಾಟಗಾರ, ಬಹುಭಾಷ ಬರಹಗಾರ, ವೇದ ವಿದ್ವಾಂಸ.ಅಪ್ಪಟ ಸಂಪ್ರದಾಯಸ್ಥ ವೈದಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ಸ್ವಂತಹಿತಕ್ಕಿಂತ ಮಿಗಿಲಾಗಿ ಸಮಾಜ ಚಿಂತನೆಯನ್ನು ರಕ್ತಗತವಾಗಿ ರೂಡಿ ಮಾಡಿಕೊಂಡಿರುವ ಬ್ರಾಹ್ಮಣರ ಮುಕುಟಮಣಿ.

ನಮ್ಮ ದೇಶದಲ್ಲಿ ಹೊಸ ಜಾಗೃತಿ ಕಾಣಿಸಿಕೊಂಡಿದ್ದು ಹೋದ ಶತಮಾನದಲ್ಲಿ. ಅದರ ಹಿಂದಿನ 16 ರಿಂದ 19ನೇಯ ಶತಮಾನದವರೆಗೂ ದೇಶ ಬಹಳ ದುರ್ಧೆಶೆಯಲ್ಲಿತ್ತು. ದೇಶದಲ್ಲಿ ಏಕತೆ ಇರಲಿಲ್ಲ. ನಾವೆಲ್ಲಾ ಭಾರತೀಯರು ಒಂದೆ ಎಂಬ ಭಾವನೆಯೂ ಇರಲಿಲ್ಲ. ರಾಜರು,ಸಾಮಂತರು ಪಾಳೇಗಾರರು ಮುಂತಾದವರಿಂದ ದೇಶ ಹರಿದು ಚಿಂದಿ ಆಗಿದ್ದಂತೆ ಜನರ ಭಾವನೆಗಳು ಹರಿದು ಚಿಂದಿಯಾಗಿ ದೇಶ, ಧರ್ಮ, ಸಮಾಜ, ಸಂಸ್ಕೃತಿ, ಸ್ವಾಭಿಮಾನ, ದೇಶಭಕ್ತಿ ಇವುಗಳೆಲ್ಲ ಜನರಲ್ಲಿ ಮರೆತು ಹೋಗಿದ್ದವು. ಆದ್ದರಿಂದ ಪರಕೀಯರ ವಕ್ರದೃಷ್ಠಿ ನಮ್ಮ ದೇಶದ ಮೇಲೆ ಬಿದ್ದು ಒಗ್ಗಟ್ಟಿಲ್ಲದೆ ಅವರ ಅಕ್ರಮಣಕ್ಕೆ ಮಂಡಿಯೂರಿ ಅವರ ಬೂಟು ಒರೆಸುವ ಗುಲಾಮರಾದೆವು.ಆದರೆ ನಮ್ಮ ದೇಶ ದೇವನವತರಿಸಿದ ಭೂಮಿ ಆದ್ದರಿಂದ ನಾವು ಸರ್ವನಾಶವಾಗದೆ ಅನೇಕ ದೇಶಭಕ್ತ ಮಹನೀಯ ಹೋರಾಟಗಾರರಿಂದ 1947ರಲ್ಲಿ ಸ್ವಾತಂತ್ರ್ಯರಾದೆವು. ಈ ಸ್ವಾತಂತ್ರ್ಯ ಪಡೆಯಲು ಶತೃಗಳೊಂದಿಗೆ ನೇರ ಹೋರಾಟ, ಕ್ರಾಂತಿಕಾರಿಗಳ ಮದ್ದು ಗುಂಡುಗಳ ಮೊರೆತ, ನಗುನಗುತ್ತಾ ನೇಣುಗಂಬ ಏರಿಕೆ, ಶಾಂತಿಯುತ ಹೋರಾಟ ಅಹಿಂಸಾ ಮಾರ್ಗ, ಅಸಹಕಾರ ಇವುಗಳಿಗೆ ಸ್ಪೂರ್ತಿ ತುಂಬಲು ಅನೇಕ ಮಹನೀಯರು ಶ್ರಮಿಸಿದರು. ಹಿಂಸೆ ಇಲ್ಲದ ಸಮರದಲ್ಲಿ ಕವಿಗಳ ಪಾತ್ರವೂ ಪ್ರಮುಖವಾಗಿತ್ತು.ಇಂತಹ ಕವಿಗಳಲ್ಲಿ ನಮ್ಮ ನೆರೆಯ ಸೋದರ ರಾಜ್ಯವಾದ ತಮಿಳುನಾಡಿನ ಮೂಲದವರಾದ ಶ್ರೀ ಸುಬ್ರಹ್ಮಣ್ಯಭಾರತೀ ಅವರೂ ಒಬ್ಬರಾಗಿ ಜನರ ಪ್ರೀತಿಯನ್ನು ಸೂರೆಗೊಂಡರು. 1982 ಡಿಸೆಂಬರ್ 11ನೇ ದಿನಾಂಕದಂದು ತಮಿಳುನಾಡಿನ ಎಟ್ಟಿಯಾ–ಪುರಂ ಎಂಬ ಊರಲ್ಲಿ ವೈದಿಕ ಬ್ರಾಹ್ಮಣ ಕುಟುಂಬಸ್ಥರಾದ ಚಿನ್ನಸ್ವಾಮಿ ಅಯ್ಯರ್ ಮತ್ತು ಲಕ್ಷ್ಮಿ ಎಂಬ ದಂಪತಿಗಳಿಗೆ ಪುತ್ರರಾಗಿ ಜನಿಸಿದರು. ಸುಬ್ರಹ್ಮಣ್ಯ ಬಾಲಕನಾಗಿದ್ದಾಗ ಮುದ್ದಿನಿಂದ ಅವನನ್ನು ಎಲ್ಲರೂ ಸುಬ್ಬಯ್ಯ ಎಂದು ಕರೆಯುತ್ತಿದ್ದರು. ಅವನನ್ನು ಆ ಊರಿನ ಪ್ರಾಥಮಿಕ ಶಾಲೆಗೆ ಸೇರಿಸಿದರು. ಆ ಶಾಲೆಯ ವಾತಾವರಣ ವಿದ್ಯಾಭ್ಯಾಸಕ್ರಮ ಅವನಿಗೆ ಹಿಡಿಸಲಿಲ್ಲ. ಅಲ್ಲಿ ನಿರ್ಬಂಧಗಳು ಹೆಚ್ಚು ಇರುತ್ತಿದ್ದವು. ಪಾಠ ಪ್ರವಚನಗಳಲ್ಲಿ ಜೀವಕಳೆ ಇರುತ್ತಿರಲಿಲ್ಲ. ಅವನು ಹೆಚ್ಚಾಗಿ ಪ್ರಕೃತಿ ಸೌಂದರ್ಯದೊಡನೆ ನಲಿಯುತ್ತಿದ್ದನು. ಸುಬ್ಬಯ್ಯನಿಗೆ ಐದು ವರ್ಷ ತುಂಬುವ ವೇಳೆಗೆ ಅವನ ತಾಯಿ ಲಕ್ಷ್ಮಿ ಕಾಲವಾದರು. ಸುಬ್ಬಯ್ಯ ಆಕೆಗೆ ಚೊಚ್ಚಲು ಮಗ. ಅವನನ್ನು ಬಹಳ ಪ್ರೀತಿಸುತ್ತಿದ್ದರು. ತಾಯಿ ಹೋದದ್ದು ಅವನಿಗೆ ತುಂಬಲಾರದ ನಷ್ಟವಾಯಿತು. ಶಾಲೆಯಲ್ಲಿ ಅಷ್ಟೇನೂ ಕಲಿಯದಿದ್ದರೂ ಹುಡುಗ ಬಹು ಜಾಣ. ವಯಸ್ಸಿಗೆ ಮೀರಿದ ತಿಳುವಳಿಕೆ. ಮತ್ತು ಒಳ್ಳೆಯ ಮಾತುಗಾರ.ಇವನ ಮಾತುಗಳು ಎಲ್ಲರನ್ನೂ ಸೆಳೆಯುತ್ತಿದ್ದವು. ಪ್ರಾಸವಿರುವ ಪದಗಳನ್ನು ಬಳಸಿ ನಿರಾಯಾಸವಾಗಿ ಕವಿತೆಗಳನ್ನು ರಚಿಸುತ್ತಿದ್ದ.ಎಳೆಯ ವಯಸ್ಸಿನಿಂದಲೇ ಸುಬ್ಬಯ್ಯನಿಗೆ ತಮಿಳು ಭಾಷೆಯಲ್ಲಿ ಮತ್ತು ತಮಿಳು ಸಾಹಿತ್ಯದಲ್ಲಿ ಬಹಳ ಪ್ರೀತಿ. ಪ್ರೌಢ ಶಾಲೆಗೆ ಸೇರಿದ ಮೇಲಂತೂ ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಕಲಿತ. ಅದರಲ್ಲಿ ಹೆಚ್ಚು ಜ್ಞಾನವನ್ನು ಆರ್ಜಿಸಿಕೊಂಡು ಇಂಗ್ಲಿಷ್ ಭಾಷೆಯಲ್ಲಿ ಪ್ರಬಂಧ,ಕವಿತೆಗಳನ್ನು ರಚಿಸಿದನು. ಆದರೆ ಪ್ರೌಢಶಾಲೆಯ ವಿದ್ಯಾಭ್ಯಾಸ ಅವನಿಗೆ ಹಿಡಿಸಲಿಲ್ಲ. ಅಲ್ಲಿ ಸತ್ವಪೂರ್ಣವಾದ ಮತ್ತು ನಮ್ಮ ಸಂಸ್ಕೃತಿಯನ್ನು ತಿಳಿಸುವ ಪಾಠಗಳು ಇರಲಿಲ್ಲ. ಪೂರ್ವಕಾಲದ ವೀರರ ಚರಿತ್ರೆಗಳಿರಲಿಲ್ಲ.ಹಾಗಾಗಿ ಮೆಟ್ರುಕಲೇಶನ್ ಪರೀಕ್ಷೆಯನ್ನು ಎದುರಿಸಲಿಲ್ಲ.ಆಗಹುಟ್ಟೂರಾದ ಎಟ್ಟಿಯಾಪುರಂಗೆ ಹಿಂದಿರುಗಿದನು. ಎಟ್ಟಿಯಾ –ಪುರಂ ಎಂಬುದು ಒಂದು ಸಂಸ್ಥಾನ. ಒಮ್ಮೆ ಅಲ್ಲಿಯ ರಾಜನ ಆಸ್ಥಾನದಲ್ಲಿ ರಾಜ ಮತ್ತು ಅನೇಕ ವಿದ್ವಾಂಸರಿಂದ ಕೂಡಿದ ಒಂದು ಗೋಷ್ಠಿ ಏರ್ಪಟ್ಟಿತ್ತು. “ವಿಧ್ಯಾಭ್ಯಾಸ” ಎಂಬ ವಿಷಯದ ಬಗ್ಗೆ ಚರ್ಚೆ.ಅದರಲ್ಲಿ ಸುಬ್ರಹ್ಮಣ್ಯ ಭಾರತೀಯೂ ಭಾಗವಹಿಸಿದ್ದನು. ಇವನ ವಾದವೆಲ್ಲ ತಲೆದೋಗಿಸುವಂತ್ತಿದ್ದು ಮತ್ತು ತಡೆಯಿಲ್ಲದ ಮಾತಿನಧಾರೆ. ಮಧ್ಯಮಧ್ಯ ಹಾಸ್ಯ ಸಭಿಕರೆಲ್ಲ ತಲೆದೂಗಿದರು. ವಿದ್ವಾಂಸರೊಬ್ಬರು

ಇವನ ಪಾಂಡಿತ್ಯವನ್ನು ನೋಡಿ ಇವನನ್ನು **"ಭಾರತಿ"** ಎಂದು ಕರೆದರು ಭಾರತಿ ಎಂದರೆ ಆ ಸರಸ್ವತಿ ದೇವಿಯ ಮತ್ತೊಂದು ಹೆಸರು. ಸುಬ್ಬಯ್ಯ ಎಂದು ಕರೆಸಿಕೊಳ್ಳುತ್ತಿದ್ದ ಬಾಲಕ ಅಂದಿನಿಂದ ಸುಬ್ರಮಣ್ಯ ಭಾರತಿಯಾದ. ಆಗ ಅವನು ಹನ್ನೊಂದು ವರ್ಷದ ಕಿಶೋರ. ಭಾರತಿಯವರು ಚಿಕ್ಕವರಿದ್ದಾಗಲೇ ತಂದೆ ತಾಯಿಯನ್ನು ಕಳೆದುಕೊಂಡರು. ಮುಂದೆ ಕಾಲೇಜಿಗೆ ಸೇರುವಾಗಲೇ ಅನೇಕ ಪ್ರಾವೀಣ್ಯತೆ ಪಡೆದಿದ್ದರು. ಉನ್ನತಾಭ್ಯಾಸಕ್ಕೆ ವಾರಣಾಸಿಗೆ ಹೋದಾಗ ವೇದ, ಪುರಾಣ, ಹಿಂದುತತ್ವ ಸಿದ್ಧಾಂತಗಳ ಕಡೆ ಆಕರ್ಷಿತರಾದರು. ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯತ್ತ ಇವರು ಆಸಕ್ತರಾದರು. ತಮಿಳುನಾಡಿಗೆ ಹಿಂದಿರುಗಿ ಬಂದು ಶಾಲೆಯೊಂದರಲ್ಲಿ ಶಿಕ್ಷಕರಾದರು. ಸ್ವದೇಶಿಮಿತ್ರ ಎಂಬ ಪತ್ರಿಕೆಯ ಮೂಲಕ ಪತ್ರಿಕಾರಂಗಕ್ಕೂ ಕಾಲಿಟ್ಟರು.ಇವರು ಸ್ವಾಮಿ ವಿವೇಕಾನಂದರ ಶಿಷ್ಯೆ ಭಗಿನಿನಿವೇದಿತಾ ಅವರನ್ನು ಭೇಟಿಯಾದರು. ನಂತರ ಆಕೆಯ ಅನುವಾಯಿಯಾದರು. ಸ್ವದೇಶಿ ಚಳುವಳಿ ಹಾಗೂ ಬಾಲಗಂಗಾಧರ ತಿಲಕರಂಥ ನಾಯಕರು ಇವರಿಗೆ ಆದರ್ಶವಾದರು. ಕಾಂಗ್ರೆಸ್ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಕ್ರಾಂತಿಕಾರಿ ಚಿದಂಬರಂ ಪಿಳ್ಳೆ ಜೊತೆ ಸೇರಿ ಐತಿಹಾಸಿಕ ಸೂರತ್ ಸಮ್ಮೇಳನದಲ್ಲಿ ಭಾಗವಹಿಸಿದರು. ತಮಿಳು ಹಾಗೂ ಇಂಗ್ಲೀಷ್ ಭಾಷೆಯಲ್ಲಿ ವಿಜಯ, ಇಂಡಿಯಾ, ಬಾಲ ಭಾರತಂ ಮೊದಲಾದ ರಾಷ್ಟ್ರೀಯವಾದಿ ಪತ್ರಿಕೆಗಳಲ್ಲಿ ಸಂಪಾದಕರಾಗಿ ಕೆಲಸ ಮಾಡಿದರು. ಆ ಸಮಯದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬರೆಯುತ್ತಿದ್ದ ಪತ್ರಿಕೆಯ ಒಬ್ಬ ಸಂಪಾದಕನ ಬಂಧನವಾಯಿತು. ಕೂಡಲೇ ಭಾರತಿಯವರು ನಾನಿಲ್ಲಿದ್ದರೆ ನನ್ನ ಬಂಧನವೂ ಆಗುತ್ತದೆ. ಲೇಖನಿಯ ಮೂಲಕ ಜನಜಾಗೃತಿ ಕಾರ್ಯಕ್ಕೆ ಹೊಡೆತಬೀಳುತ್ತದೆ. ಆದ್ದರಿಂದ ಫ್ರೆಂಚ್ ಆಡಳಿತವಿರುವ ಪಾಂಡಿಚರಿಗೆ ಪರಾರಿಯಾಗಿ ಅಲ್ಲಿಂಲೇ ತಾವು ಪತ್ರಿಕೆ ಪ್ರಕಟಿಸುವುದನ್ನು ಮುಂದುವರೆಸಿದರು. ಜೊತೆಗೆ ಆ ಸಮಯದಲ್ಲಿ ಭಾರತೀಯವರು ತಮಿಳಿನಲ್ಲಿ ಬರೆಯುತ್ತಿದ್ದ ಕವಿತೆಗಳಿಗೆ ತಮಿಳು ಸಾಹಿತ್ಯಕ್ಕೆ ಆಧುನಿಕತೆಯ ಸ್ಪರ್ಶ ನೀಡಿದರು. ಪುರಾಣದ ಜೊತೆ ದೇಶಭಕ್ತಿ ಮತ್ತು ಸಾಮಾಜಿಕ ಸಂದೇಶಗಳನ್ನು ಸೇರಿಸಿ ಬರೆದಂತಹ ಕಥೆಗಳು ಜನಮನದಲ್ಲಿ ನೆಲೆಯೂರಿದವು.ಇವರು ಬರೆದಂತಹ **"ಕೂಯಿಲ್ಪಟ್ಟ", "ಕಣ್ಣನ್ಪಟ್ಟ", "ಪಾಂಚಾಲಶಪದಂ"** ಮೊದಲಾದವು ಶ್ರೇಷ್ಠ ಕೃತಿಗಳು ಎಂದೆನಿಸಿಕೊಂಡವು. ಸ್ವಾತಂತ್ರ್ಯದ ಕಿಚ್ಚನ್ನು ಹತ್ತಿಸುವ ಇಂತಹ ಬರಹಗಳು ಬ್ರಿಟಿಷರನ್ನು ಕೆರಳಿಸಿದ್ದವು.

ಆದ್ದರಿಂದಲೇ 1918ರಲ್ಲಿ ಭಾರತೀ ಅವರು ತಮಿಳುನಾಡು ಪ್ರವೇಶಿಸಿದ ಕೂಡಲೇ ಬ್ರಿಟಿಷರಿಂದ ಬಂಧಿತರಾದರು, ಕೆಲಕಾಲ ನಂತರ ಜೈಲಿನಿಂದ ಬಿಡುಗಡೆಯಾಗಿ ಬಂದ ನಂತರ ಪುನಃ **"ಸ್ವದೇಶಿ ಮಿತ್ರ"** ಪತ್ರಿಕೆಯನ್ನು ಪ್ರಾರಂಭಿಸಿದರು.ಆ ವೇಳೆಗಾಗಲೇ ಭಾರತೀಯವರು ಬಡತನ ಮತ್ತು ಅನಾರೋಗ್ಯದಿಂದ ಬಳಲಿಹೋಗಿದ್ದರು. ಮದರಾಸಿನ ಪಾರ್ಥಸಾರಥಿ ಎಂಬ ದೇವಾಲಯಕ್ಕೆ ಎಂದಿನಂತೆ ಭೇಟಿ ಇತ್ತು ಎಂದಿನ ಅಭ್ಯಾಸದಂತೆ ಅಲ್ಲಿಯ ದೇವಸ್ಥಾನದ ಆನೆಗೆ ಆಹಾರ ನೀಡುತ್ತಿದ್ದಾಗ ಆ ಕ್ಷಣದಲ್ಲಿ ಮತ್ತೇರಿದ ಆನೆಯಿಂದ ಭೀಕರವಾಗಿ ದಾಳಿಗೊಳಗಾದರು. ಸೊಂಡಲಿನಿಂದ ಮೇಲೆತ್ತಿ ನೆಲಕ್ಕೆ ಅಪ್ಪಳಿಸಿತು. ಶುಶ್ರೂಷೆ ಫಲಿಸದೆ ಕೊನೆಗೆ 1921ರ ತಮ್ಮ 38ನೇ ವಯಸ್ಸಿನಲ್ಲಿ ಸುಬ್ರಹ್ಮಣ್ಯಭಾರತೀಯವರು ನಿಧನರಾದರು. ತಾಯಿ ಭಾರತಿಯ ಕೊರಳ ಹಾರದಲ್ಲಿ ಒಂದು ಪುಷ್ಪವಾದರು.

## ಅಶಕ್ತ ವಿಪ್ರ-ಅಂಗವಿಕಲರು ಹಾಗೂ ವೃದ್ಧರಿಂದ ಮಾಸಾಶನಕ್ಕಾಗಿ ಅರ್ಜಿ ಆಹ್ವಾನ

**ಸಂಕಷ್ಟದಲ್ಲಿರುವ ಅಶಕ್ತ ವಿಪ್ರ ಬ್ರಾಹ್ಮಣ ಅಂಕವಿಕಲರು ಹಾಗೂ ನೋಡಿಕೊಳ್ಳಲು ಯಾರೂ ಇಲ್ಲದ ೬೦ ವರ್ಷಕ್ಕೆ ಮೇಲ್ಪಟ್ಟ ವೃದ್ಧ ಬ್ರಾಹ್ಮಣರಿಗೆ ಪ್ರತಿ ತಿಂಗಳು ೫೦೦ ರೂ.ಗಳನ್ನು ಮಾಸಾಶನ ನೀಡುವ ಯೋಜನೆಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಮಹಾಸಭಾ ಕಛೇರಿ / ಮಹಾಸಭೆಯ ಸ್ಥಳೀಯ ಪದಾಧಿಕಾರಿಗಳಿಂದ ಪಡೆದು, ಅರ್ಜಿ ಸಲ್ಲಿಸಲು ಕೋರಿದೆ. ಮಹಾಸಭೆಯ ಮಾಸಾಶನ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹರನ್ನು ಆಯ್ಕೆ ಮಾಡಲಿದ್ದು, ಸಮಿತಿಯ ತೀರ್ಮಾನವೆ ಅಂತಿಮ.**

## ಮಾಶಾಸನಕ್ಕೆ ಪ್ರಾಯೋಜಕರಾಗಲು ಮನವಿ

**ಮಹಾಸಭೆಯ ಮೆಲ್ಕಂಡ ಮಾಸಾಶನ ಯೋಜನೆಗೆ ಒಂದು ವ್ಯಕ್ತಿಗೆ ವರ್ಷಕ್ಕೆ ೬೦೦೦ ರೂ. ಗಳನ್ನು ನೀಡಿ ಪ್ರಾಯೋಜಕರಾಗಿ ಅಶಕ್ತ ವಿಪ್ರಕರಿಗೆ ನೆರವಾಗುವಂತೆ ಈ ಮೂಲಕ ಸಶಕ್ತ ವಿಪ್ರರಲ್ಲಿ ವಿನಂತಿ. ಕನಿಷ್ಠ ೬೦೦೦ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತನೀಡಿ ಪ್ರಾಯೋಜಕರಾದವರನ್ನು ವಿಪ್ರನುಡಿಯಲ್ಲಿ ಪರಿಚಯಿಸಲಾಗುವುದು.**

ಪ್ರಧಾನ ಕಾರ್ಯದರ್ಶಿ
ಅಖಿಲ ಕರ್ನಾಟಕ ಬ್ರಹ್ಮಾಣ ಮಹಾಸಭಾ

# "ಮಿತಾಕ್ಷರ"– ವಿಜ್ಞಾನೇಶ್ವರ

– ಕೈವಾರ ಕೃಷ್ಣಮೂರ್ತಿ



ವಿಜ್ಞಾನೇಶ್ವರ ಬೇರೆ ಯಾರೂ ಆಗಿರದೆ ಒಬ್ಬ ಅಚ್ಚ ಕನ್ನಡಿಗನೆಂಬುದು ಕರ್ನಾಟಕಕ್ಕೆ ಮತ್ತು ಕನ್ನಡಿಗರಿಗೆ ರೋಮಾಂಚನ ಉಂಟುಮಾಡುವ ಸಂಗತಿ. ಕಲ್ಬುರ್ಗಿಯ ಆಗ್ನೇಯಕ್ಕೆ ಶಹಬಾದ ರಸ್ತೆಯಲ್ಲಿ ಸುಮಾರು 16 ಕಿ.ಮೀ ದೂರದಲ್ಲಿ ಮರತೂರು ಎಂಬ ಗ್ರಾಮವಿದೆ. ತನ್ನ ಹೆಸರನ್ನು ಅನ್ವರ್ಥ ಗೊಳಿಸುವುದಕ್ಕೋ ಎನ್ನುವಂತೆ ಕಳೆದ 8–9 ಶತಮಾನಗಳಿಂದ 'ಮರತೂರು' ಮರೆತ ಊರಾಗಿಯೇ ಉಳಿದಿತ್ತು. ಆದರೆ ಈಗ ಅದು ಮರೆಯಲಾಗದ ಊರಾಗಿ ಆವಿರ್ಭವಿಸಿದೆ. ರಾಷ್ಟ್ರದ ಭೂಪಟದಲ್ಲೇ ಅದಕ್ಕೊಂದು ಮಹತ್ವದ ಸ್ಥಾನ ಬಂದಿದೆ. ಕಾರಣ ವಿಜ್ಞಾನೇಶ್ವರರು ಬಾಳಿ ಬದುಕಿದ ಊರೇ ಮರತೂರು. 9 ಶತಮಾನಗಳ ಹಿಂದೆ 'ಭಾರತೀಯ ನ್ಯಾಯಶಾಸ್ತ್ರ' ಎಂಬ ವಿನೂತನ ಶಾಸ್ತ್ರಕ್ಕೆ ಅಸ್ತಿವಾರ ಹಾಕಿ ಕನ್ನಡ ನಾಡಿನ ಹಾಗೂ ಭರತ ವರ್ಷದ ಅಮೂಲ್ಯ ಆಸ್ತಿಯಾಗಿ ಪರಿಣಮಿಸಿರುವ ವಿಜ್ಞಾನೇಶ್ವರ ಭಾರತ ಕಂಡ ಓರ್ವ ಅತ್ಯಂತ ಪ್ರತಿಭಾನ್ವಿತ ದಾರ್ಶನಿಕ, ಸಂವೇದನಾಶೀಲ ಮೇರು ವ್ಯಕ್ತಿ.

ವಿಜ್ಞಾನೇಶ್ವರರನ್ನು ಮೊಟ್ಟಮೊದಲ ಬಾರಿಗೆ ಆಧುನಿಕ ಜಗತ್ತಿಗೆ ಪರಿಚಯಿಸಿದ ಶ್ರೇಯಸ್ಸು ಖ್ಯಾತ ಇತಿಹಾಸ ಸಂಶೋಧಕರಾದ ಡಾ. ಪಿ.ಬಿ ದೇಸಾಯಿ ಅವರಿಗೆ ಸಲ್ಲುತ್ತದೆ. ಮರತೂರಿನಲ್ಲಿ ದೊರೆತ ಶಾಸನದ ವಿವರಗಳನ್ನು ಮೊಟ್ಟಮೊದಲ ಬಾರಿಗೆ 1932 ರಲ್ಲಿ ತಮ್ಮ ನಿಯತಕಾಲಿಕ ಪ್ರಾಚೀನ ಕರ್ನಾಟಕ ಹೊಸ ಬೆಳಕು ಸಂಚಿಕೆಯಲ್ಲಿ ಪ್ರಕಟಿಸಿದರು.

ಮರತೂರು ಶಾಸನದಿಂದ ವಿಜ್ಞಾನೇಶ್ವರರ ವೈಯಕ್ತಿಕ ವಿವರಗಳು ತಿಳಿದು ಬರುತ್ತಿದ್ದು ಅವು ಹೀಗಿವೆ. ಅಟ್ಟಳೆ ನಾಡಿನ 'ಮಾಸೆಯ ಮಡು' ಗ್ರಾಮದಲ್ಲಿ ಸೋಮರಾಜ ಮತ್ತು ಆತನ ಹೆಂಡತಿಗೆ ಕೌಶಿಕ ಗೋತ್ರ ಲಲಾಮನೆನಿಸಿ ಈ ವಿಜ್ಞಾನೇಶ್ವರನು ಜನಿಸುತ್ತಾನೆ. ಇವರಿಗೆ ಕ್ರಮವಾಗಿ ಕಾಮದೇವ, ಸೋಮದೇವ, ನರಸಿಂಗ ಮತ್ತು ಬೀಚಿರಾಜರು ಜನಿಸುತ್ತಾರೆ.

ಕೇವಲ ಒಂದು ಕೃತಿಯಿಂದ ಒಬ್ಬ ಲೇಖಕ ಅಮರನಾಗುವ ಸೌಭಾಗ್ಯ ಬೆರಳೆಣಿಕೆಯ ಲೇಖಕರಿಗಷ್ಟೇ ದೊರೆಯುತ್ತದೆ. ಅರ್ಥಶಾಸ್ತ್ರದಿಂದಾಗಿ ಕೌಟಿಲ್ಯ, ಕವಿರಾಜಮಾರ್ಗದಿಂದಾಗಿ ಶ್ರೀವಿಜಯ, ಜೈಮಿನಿ ಭಾರತದಿಂದಾಗಿ ಲಕ್ಷ್ಮೀಶ ಹೀಗೆ ಮಹಾಮಹಿಮ ಲೇಖಕರನ್ನು ಅವರ ಏಕೈಕ ಅಮರ ಕೃತಿಗಳನ್ನು ಹೆಸರಿಸಬಹುದು. ಇವರಲ್ಲಿ ವಿರಾಜಮಾನರಾಗಿ ಬೆಳಗುವವರೆಂದರೆ 'ಮಿತಾಕ್ಷರ' ಕೃತಿಯ ಕರ್ತೃ ವಿಜ್ಞಾನೇಶ್ವರ. ತಮ್ಮ ಮಿತಾಕ್ಷರ ಕೃತಿಯಿಂದ ವಿಜ್ಞಾನೇಶ್ವರರು ಸುಮಾರು 9 ಶತಮಾನಗಳಿಂದ ಭರತ ಖಂಡವನ್ನು ಬೆಳಗುತ್ತಲೇ ಇದ್ದಾರೆ. ಹಿಂದೂ ಧರ್ಮ ಶಾಸ್ತ್ರದ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟ **'ಮಿತಾಕ್ಷರ'** ಭಾರತದ ಆಧುನಿಕ ನ್ಯಾಯ ಪದ್ಧತಿಗೂ ಹೆಚ್ಚು ಕಡಿಮೆ ಏಕೈಕ ಆಕರ ಗ್ರಂಥವಾಗಿದೆ.

**ಅಲ್ಪಾಕ್ಷರಂ ಅಸಂದಿಗ್ಧಂ ಸಾರವತ್ ವಿಶ್ವತೋಮುಖಮ್ ।**
**ಅಸ್ತೋಭಂ ಅನವದ್ಯಂಚ ಸೂತ್ರಂ ಸೂತ್ರಂವಿದೋಮಿದುಃ ॥**

ಧರ್ಮ ಸೂತ್ರಗಳಿಗೆ ಅನ್ವಯಿಸುವ ಈ ಮಾತು ವಿಜ್ಞಾನೇಶ್ವರ ಮಿತಾಕ್ಷರಕ್ಕೂ ವಿಸ್ತರಿಸಿದರೆ ಪ್ರಮಾದವೇನೂ ಆಗಲಾರದು ಧರ್ಮಸೂತ್ರಗಳು ಎಷ್ಟೊಂದು ಸಂಗ್ರಾಹ್ಯವೋ ಮಿತಾಕ್ಷರವು ಅಷ್ಟೇ ಸಂಗ್ರಾಹ್ಯ. ಸಂಕ್ಷಿಪ್ತ ವಿಷಯಗಳ ಪ್ರತಿಪಾದನೆಯನ್ನು ಅತ್ಯಂತ ಕಡಿಮೆ ಅಕ್ಷರಗಳಲ್ಲಿ ಸ್ಪಷ್ಟವಾಗಿ ಸರ್ವರಿಗೂ ಸಮ್ಮತವಾಗುವಂತೆ ಹೇಳುವ ಕಲಾತ್ಮಕತೆಯನ್ನು ವಿಜ್ಞಾನೇಶ್ವರ ಸಿದ್ಧಿಸಿಕೊಂಡಿದ್ದ.

ಸ್ಮೃತಿಕಾರರಲ್ಲಿ ಮೊದಲಿಗನು ಅಗ್ರಗಣ್ಯನು ಆಗಿರುವ ಮನುವನ್ನು ಮಾನವ ಕುಲದ ಪಿತೃ ಎಂದು ಕರೆಯಲಾಗಿದ್ದರೂ ಮನುಸ್ಮೃತಿಯ ಅನಂತರದ ಅತ್ಯಂತ ಮಹತ್ವದ್ದು, ಶ್ರೇಷ್ಠವಾದದ್ದು ಎಂದರೆ 'ಯಾಜ್ಞವಲ್ಕ್ಯ ಸ್ಮೃತಿ'. ಇದು ಭಾರತೀಯ ಸಾಮಾಜಿಕ, ರಾಜಕೀಯ, ನ್ಯಾಯಿಕ ಪದ್ಧತಿಯನ್ನು ಮಾನವೀಯ ನೆಲೆಗಟ್ಟಿನಲ್ಲಿ ವ್ಯಾಖ್ಯಾನಿಸುವ ಅತ್ಯಂತ ಮಹತ್ವದ ಸ್ಮೃತಿ. ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ ಹೇಗೆ ಜನಪರವಾಗಿ ಇರಬೇಕೆಂಬುದನ್ನು ಅದು ಸಾರುತ್ತದೆ. ಒಂದೇ ಎರಡೇ ಹಲವು 10 ಸಂಗತಿಗಳನ್ನು ಅತ್ಯಂತ ಮೌಲಿಕವಾಗಿ, ಸರ್ವರಿಗೂ ಸಮ್ಮತವಾಗುವ ರೀತಿಯಲ್ಲಿ ಯಾಜ್ಞವಲ್ಕ್ಯ ಸ್ಮೃತಿ ಪ್ರತಿಪಾದಿಸುತ್ತದೆ.

ಯೋಗೀಶ್ವರ ಯಾಜ್ಞವಲ್ಕ್ಯರು ಸ್ಮೃತಿಕಾರರ ಸಾಲಿನಲ್ಲಿ ಅಗ್ರಗಣ್ಯರು ಈ ಜಗತ್ತು ಕಂಡ ಅಪರೂಪದ ತತ್ವಜ್ಞಾನಿ ಹಾಗೂ ದಾರ್ಶನಿಕರು. ಯಾಜ್ಞವಲ್ಕ್ಯರು ಚತುರ್ವೇದ ಪಂಡಿತರಷ್ಟೇ ಅಲ್ಲ ಯೋಗಶಾಸ್ತ್ರ ಪ್ರವೀಣರೂ, ಸ್ಮೃತಿಕಾರರೂ ಆಗಿದ್ದಾರೆ. ಯಾಜ್ಞವಲ್ಕ್ಯ ಸ್ಮೃತಿಯು ಹೆಚ್ಚು ಕಡಿಮೆ ಮನುಸ್ಮೃತಿಯ ಮಾದರಿಯಲ್ಲಿದ್ದರೂ ಇಲ್ಲಿ ವಿಷಯಗಳ ತಾರ್ಕಿಕತೆ ಸಮ್ಮಿಳನ ಪ್ರತಿಪಾದನೆ ಮುಂತಾದವುಗಳು ಅತ್ಯಂತ ಸ್ಪಷ್ಟವಾಗಿವೆ. ಕೆಲವು ವಿಷಯಗಳಲ್ಲಿ ಮನುಸ್ಮೃತಿಯಲ್ಲಿನ ಕಾಠಿಣ್ಯ ಇಲ್ಲಿ ಕಂಡುಬರುವುದಿಲ್ಲ. ಉದಾಹರಣೆಗೆ ಶೂದ್ರರು ಮತ್ತು ಸ್ತ್ರೀಯರ ವಿಷಯಗಳಲ್ಲಿ ಮತ್ತು ತಪ್ಪಿತಸ್ಥರಿಗೆ ವಿಧಿಸುವ ಶಿಕ್ಷೆಯಲ್ಲಿ ಮನು ಅನುಸರಿಸುವ ಕಠೋರ ನಿಲುವನ್ನು ಯಾಜ್ಞವಲ್ಕ್ಯರು ಅನುಸರಿಸುವುದಿಲ್ಲ ಈ ಎಲ್ಲ ವಿಷಯಗಳಲ್ಲಿ ಅವರು ಸಾಕಷ್ಟು ಮೃದು ಧೋರಣೆಯನ್ನು ತಾಳಿರುವುದಲ್ಲದೆ ವಿಷಯಗಳನ್ನು ಮಾನವೀಯ ನೆಲೆಯಲ್ಲಿ ನೋಡುವಲ್ಲಿ, ಪರಾಮರ್ಶಿಸುವಲ್ಲಿ ಮತ್ತು ನಿರ್ಣಯಕ್ಕೆ ಬರುವಲ್ಲಿ ಪ್ರಗತಿಪರ ಚಿಂತನೆ ಕಾಳಜಿಯನ್ನು ಮೆರೆದಿದ್ದಾರೆ. ವ್ಯವಹಾರ ವಿಧಾನಗಳಿಗೆ ಸಂಬಂಧಿಸಿದ ನಿಯಮಗಳಿಗೆ ಮನುಸ್ಮೃತಿಯಲ್ಲಿ ಮಹತ್ವವಿರಲಿಲ್ಲ. ಆದರೆ ಯಾಜ್ಞವಲ್ಕಯ ಸ್ಮೃತಿಯಲ್ಲಿ ಅವು ವ್ಯವಸ್ಥಿತವಾಗಿ ಉಲ್ಲೇಖಗೊಂಡಿರುವುದನ್ನು ಕಾಣಬಹುದು ಮನುಸ್ಮೃತಿಗೆ ಹೋಲಿಸಿದಲ್ಲಿ ಯಾಜ್ಞವಲ್ಕ್ಯ ಸ್ಮೃತಿ ಸಂಕ್ಷಿಪ್ತವೂ, ವೈಜ್ಞಾನಿಕವೂ ಮತ್ತು ಪ್ರಾಯೋಗಿಕವೂ ಆಗಿದೆ. ಅವರ ಅಭಿವ್ಯಕ್ತಿಗಳು ಕ್ಲುಪ್ತವೂ ವೈಶಿಷ್ಟ್ಯದಿಂದ ಕೂಡಿದವೂ ಆಗಿವೆ. ಸ್ಪಷ್ಟತೆ, ಮೃದುತ್ವ, ಮಾನವೀಯತೆ ಪ್ರಯೋಗಾರ್ಹತೆ, ಸಂಕ್ಷಿಪ್ತತೆ, ಸರಳತೆ ಪ್ರಗತಿಪರತೆ ಇವೆಲ್ಲವೂ ಯಾಜ್ಞವಲ್ಕ್ಯ ಸ್ಮೃತಿಯ ಸ್ತುತ್ಯರ್ಹ ಗುಣಲಕ್ಷಣಗಳಾಗಿವೆ.

ಮಾನವೀಯ ಸ್ಪಂದನೆಯ ಯಾಜ್ಞವಲ್ಕ್ಯ ಸ್ಮೃತಿಗೆ ವಿಜ್ಞಾನೇಶ್ವರ ಮಾರುಹೋಗಿದ್ದು ಯಥಾರ್ಥವೇ ಆಗಿದೆ. ವಿಜ್ಞಾನೇಶ್ವರ ಎಲ್ಲ ಸ್ಮೃತಿಗಳನ್ನು ಅಧ್ಯಯನ ಮಾಡಿ ಅವುಗಳ ಸಾರವನ್ನು ಅರಿತವನಾಗಿದ್ದು ಅವುಗಳೆಲ್ಲದರ ಪೈಕಿ ಹೃದಯಕ್ಕೆ, ಮನಸ್ಸಿಗೆ, ಬುದ್ಧಿಗೆ ಅತಿಯಾಗಿ ತಾಕಿದ್ದೆಂದರೆ ಯಾಜ್ಞವಲ್ಕ್ಯ ಸ್ಮೃತಿ. ಇಂತಹ ಅಮೋಘವಾದ ಧರ್ಮಶಾಸ್ತ್ರಕ್ಕೆ ವಿಜ್ಞಾನೇಶ್ವರ ಬರೆದ ಅಮೋಘ ವ್ಯಾಖ್ಯಾನವೇ **'ಮಿತಾಕ್ಷರ'**.

ಧರ್ಮ ಸೂಕ್ಷ್ಮಗಳನ್ನು ಮತ್ತು ಧರ್ಮ ಸಮ್ಮತವಾದ ಮಾನವೀಯ ಮಿಡಿತಗಳಿಗೆ ಸ್ಪಂದಿಸುವ ನ್ಯಾಯವಿಧಾನ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಸಮಗ್ರವಾಗಿ ಮತ್ತು ಸುಂದರವಾಗಿ ಚಿತ್ರಿಸುವ ಮಿತಾಕ್ಷರ ಅಸ್ಸಾಂ ಮತ್ತು ಬಂಗಾಳ ಪ್ರಾಂತ ಒಂದನ್ನು ಹೊರತುಪಡಿಸಿ ಭಾರತಾದ್ಯಂತ ಪ್ರಚಲಿತದಲ್ಲಿದ್ದು ಮಾನ್ಯತೆಯನ್ನು ಪಡೆದಿದೆ. ಭಾರತದ ತುಂಬೆಲ್ಲ ಜಾರಿಯಲ್ಲಿ ಬಳಕೆಯಲ್ಲಿದ್ದ ಏಕೈಕ ಧರ್ಮಶಾಸ್ತ್ರ ನಿಬಂಧನೆಂದರೆ ವಿಜ್ಞಾನೇಶ್ವರರ **'ಮಿತಾಕ್ಷರ'**.

ಕ್ರಿಸ್ತಶಕ 1123 ಜನವರಿ 6ನೇ ತಾರೀಕಿಗೆ ಮರತೂರು ಶಾಸನ ವಿಜ್ಞಾನೇಶ್ವರರ ಬಗ್ಗೆ ಖಚಿತವಾದ ವೈಯಕ್ತಿಕ ಮಾಹಿತಿ ನೀಡುವುದಲ್ಲದೆ ಆತನ ಪಾಂಡಿತ್ಯ ಖ್ಯಾತಿಯ ಬಗ್ಗೆಯೂ ಪರಿಚಯ ಮಾಡಿಕೊಡುತ್ತದೆ ವಿಜ್ಞಾನೇಶ್ವರನ ನಾಲ್ವರು ಪುತ್ರರಲ್ಲಿ ಕಡೆಯವನಾದ ಬೀಚಿ ರಾಜನು ಹೆಚ್ಚು ಪ್ರಸಿದ್ಧನಾಗಿ **'ಪೆರ್ಗಡೆ'** (ದೊಡ್ಡ ಹೆಗ್ಗಡೆ) ವೃತ್ತಿಯನ್ನು ಕೈಕೊಳ್ಳುತ್ತಾನೆ. ಮರತೂರಿನಲ್ಲಿ ಆತ ಕಟ್ಟಿಸಿರುವ ಸುಂದರ ಕಾಶಿ ವಿಶ್ವನಾಥ ಹಾಗೂ ಕಾಳಿಂಗೇಶ್ವರ ದೇವಾಲಯಗಳು ಚಾಲುಕ್ಯ ಶೈಲಿಯಲ್ಲಿ ಇರುವುದರಿಂದ ಮತ್ತು ಶಾಸನ ಇಲ್ಲಿಯೇ ದೊರೆತಿರುವುದರಿಂದ ನಾವು ಪೆರ್ಗಡೆ ಬೀಚಿ ರಾಜ ಕಟ್ಟಿಸಿದ ದೇವಾಲಯಗಳೆಂಬುದರಲ್ಲಿ ಸಂಶಯವಿಲ್ಲ.

ವಿಜ್ಞಾನೇಶ್ವರ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಪರಮಆರಾಧ್ಯ ವ್ಯಕ್ತಿಯಾಗಿದ್ದನು. ವಿಜ್ಞಾನೇಶ್ವರನ ಪ್ರಖರ ಪಾಂಡಿತ್ಯ ಆತನ ಬಗ್ಗೆ ಚಕ್ರವರ್ತಿ ವಿಕ್ರಮಾದಿತ್ಯನಿಗೆ ಇದ್ದ ಗೌರವ ಆದರಗಳನ್ನು ಮರತೂರು ಶಾಸನದಲ್ಲಿನ ಈ ಪಂಕ್ತಿಗಳು ಅತ್ಯಂತ ಪರಿಣಾಮಕಾರಿಯಾಗಿ ಸಾರುತ್ತವೆ.

**ಅರಿರಾಯ ಮಕುಟ ತಾಡಿತ**
**ಚರಣನೆನಲು ನೆಗವ್ವಿ**
**ವಿಕ್ರಮಾಂಕನ ರತ್ನೋಕರ ನಿಚಿತ ಮಕುಟ ತಾಡಿತ**

ವಿಕ್ರಮಾದಿತ್ಯನ ಕಿರೀಟ ಧರಿಸಿದ ಶಿರವು ವಿಜ್ಞಾನೇಶ್ವರ ಪಾದಂಗಳಿಗೆ ವಂದಿಸಿದಾಗ ಅವನ ಕಿರೀಟ ವಿಜ್ಞಾನೇಶ್ವರರ ಪಾದಗಳನ್ನು ಸ್ಪರ್ಶಿಸುತ್ತಿತ್ತು. ಅತ್ಯಂತ ವೈಭವಯುತ ಸಾಮ್ರಾಜ್ಯದ ಬಲಿಷ್ಠ ಚಕ್ರವರ್ತಿ ತನ್ನ ಶಿರವಿಟ್ಟು ವಿಜ್ಞಾನೇಶ್ವರನ ಪಾದಗಳಿಗೆ ನಮಸ್ಕರಿಸುತ್ತಿದ್ದ ಎಂದರೆ ವಿಜ್ಞಾನೇಶ್ವರನ ಅಸಮಾನ ಪ್ರತಿಭೆ ಪಾಂಡಿತ್ಯದ ಗಣಿಯಾಗಿದ್ದನೆಂಬುದು ವೇದ್ಯವಾಗುತ್ತಿದೆ..

ಈ ಸಂಶೋಧನೆಯ ಹುಡುಕಾಟದ ಸರಣಿಯ ನಂತರದ ಘಟ್ಟದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದವರು ಪಂಜಾಬ್ ಮತ್ತು ಹರಿಯಾಣ ಶ್ರೇಷ್ಠ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು ನಂತರ ಜಾರ್ಖಂಡ ಬಿಹಾರ ರಾಜ್ಯಗಳ ರಾಜ್ಯಪಾಲರಾಗಿ ತಮ್ಮ ಅನುಪಮ ನ್ಯಾಯಶಾಸ್ತ್ರ ಹಾಗೂ ಸಂಸ್ಕೃತ ಪಾಂಡಿತ್ಯದಿಂದ ಸುವಿಖ್ಯಾತರೂ ಆದ ಜಸ್ಟಿಸ್ ಎಂ ರಾಮಾಜೋಯಿಸ್ ಅವರು. ವಿಜ್ಞಾನೇಶ್ವರರ ಮೂಲವನ್ನು ಹುಡುಕುತ್ತಾ ನಡೆದಾಗ ಖ್ಯಾತ ಇತಿಹಾಸತಜ್ಞ ಡಾ॥ಸೂರ್ಯನಾಥ ಕಾಮತ್ ಅವರು ಮರತೂರು ಶಾಸನ ಹಾಗೂ ಅದರ ಮಹತ್ವದ ಅಂಶಗಳನ್ನು ಅವರ ಗಮನಕ್ಕೆ ತಂದರು. ವಿಜ್ಞಾನೇಶ್ವರರು ಕನ್ನಡಿಗರೆಂಬುದು ತಿಳಿದು ಪುಳಕಿತರಾದ ರಾಮಾಜೋಯಿಸರು 1990ರ ಆದಿಯಲ್ಲಿ ಮರತೂರಿಗೆ ಧಾವಿಸಿ ಅಲ್ಲಿ **'ರಾಷ್ಟ್ರೀಯ ವಿಜ್ಞಾನೇಶ್ವರ ಸ್ಮಾರಕ ಹಾಗೂ ಸಂಶೋಧನಾ ಕೇಂದ್ರ'** ಸ್ಥಾಪನೆಗೆ ಕಾರಣೀಭೂತರಾದರು. ಮರತೂರು ಶಾಸನವು ಭಾರತೀಯ ನ್ಯಾಯಶಾಸ್ತ್ರ ಇತಿಹಾಸದ ಮಹಾದ್ವಾರವನ್ನು ತೆರೆಯಲು ಕಾರಣವಾಗಿದೆ.

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್

ಗ್ರಹವೆಂಬ ಶಬ್ದದ ಪ್ರಯೋಗ ನಮ್ಮ ಈ ದೇಶದಲ್ಲಿ ಸಹಸ್ರ ಸಹಸ್ರ ವರ್ಷಗಳ ಹಿಂದಿನಿಂದ ರೂಢಿಯಲ್ಲಿದೆ. ದೇವತಾಶಕ್ತಿಗಳ ಪ್ರತಿನಿಧಿಗಳಾಗಿ ಜೀವನದ ಆಗುಹೋಗುಗಳನ್ನು ಒಂದು ರೀತಿಯಲ್ಲಿ ಬಂಧಿಸುತ್ತಿರುವುದರಿಂದ 9 ಶಕ್ತಿಗಳಿಗೂ ಸಮಾನವಾಗಿ ಗ್ರಹವೆಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. ಹೀಗೆ ಗ್ರಹಿಸುವಾಗ ಸೂರ್ಯನಿಗೂ ಇತರರಿಗೂ ವ್ಯತ್ಯಾಸವನ್ನು ಗುರುತಿಸದೇ ಇಲ್ಲ. ವೈದಿಕಸಾಹಿತ್ಯದಲ್ಲೇ ಸೂರ್ಯನನ್ನು **'ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ** – ಸೂರ್ಯನು ಈ ಚರಾಚರಾತ್ಮಕವಾದ ಜಗತ್ತಿನಲ್ಲಿ ಆತ್ಮಸ್ಥಾನದಲ್ಲಲಿದ್ದಾನೆ – ಎಂದು ಸ್ಪಷ್ಟವಾಗಿ ಹೇಳಿರುವುದುಂಟು. ಎಲ್ಲ ದೇವತಾಶಕ್ತಿಗಳೂ ಪರಮಾತ್ಮಪ್ರಕಾಶದಿಂದ ಪ್ರಕಾಶಗೊಂಡಿವೆಯೆಂಬ ಸತ್ಯಾರ್ಥವನ್ನು ಪ್ರತಿನಿಧಿಸಿ ಸೂರ್ಯನನ್ನು ಎಲ್ಲ ಚರಾಚರಜಗತ್ತಿಗೆ ಆತ್ಮಸ್ಥಾನದಲ್ಲಿ ಪರಿಗಣಿಸಿದ್ದಾರೆ. ಇದು ಬಾಹ್ಯವಾದ ವಿಷಯದಲ್ಲೂ ಹೊಂದಿಕೊಳ್ಳುವ ಸತ್ಯವೇ ಆಗಿದೆ. ಸೂರ್ಯನು ಪರಮಪುರುಷ ಸ್ಥಾನದಲ್ಲಿದ್ದು ಉಳಿದೆಲ್ಲ ಗ್ರಹಗಳೂ ಪ್ರಕೃತಿಶಕ್ತಿಗಳ ಸ್ಥಾನದಲ್ಲಿ ಕಾರ್ಯವೆಸಗುತ್ತಿರುವುದನ್ನು–

**ತೇಜಸಾಂ ಗೋಲಕಃ ಸೂರ್ಯಃ ಗ್ರಹರ್ಕ್ಷಾಣ್ಯಮ್ಬುಗೋಲಕಾಃ ।**
**ಪ್ರಭಾವನ್ತೋ ಹಿ ದೀಪ್ಯನ್ತೇ ಸೂರ್ಯರಶ್ಮಿಪ್ರಭಾವಿತಾಃ ॥**

ಸೂರ್ಯನು ಪ್ರಕಾಶದ ಗೋಲಕ. ಗ್ರಹ ನಕ್ಷತ್ರಗಳು ಜಲಗೋಲಕಗಳು. ಸೂರ್ಯನ ಪ್ರಕಾಶದಿಂದ ಪ್ರಕಾಶಗೊಂಡು ಬೆಳಗುತ್ತಿವೆ ಎಂದು ಹೇಳಿರುವುದುಂಟು. ಸೂರ್ಯನು ಸ್ವಯಂಪ್ರಕಾಶ, ಉಳಿದವುಗಳು ಪರಪ್ರಕಾಶ್ಯಗಳು ಎಂದು ವಾಸ್ತವಿಕಾಂಶವಿಲ್ಲಿ ಸ್ಪಷ್ಟವೇ ಆಗಿದೆ. **'ಅಪ ಏವ ಸಸರ್ಜಾದೌ'** ಮೊಟ್ಟಮೊದಲು ನೀರನ್ನು ಸೃಷ್ಟಿಸಿದ ಎಂಬಂತೆ ಸೃಷ್ಟಿಕ್ರಿಯೆಯಲ್ಲಿ ಜಲಕ್ಕೆ ವಿಶೇಷಸ್ಥಾನವಿದೆ. ಗ್ರಹನಕ್ಷತ್ರಗಳು ಜಲಗೋಲಕಗಳು ಎಂದಾಗ ಪ್ರಕೃತಿ ಕ್ಷೇತ್ರವನ್ನು ಪ್ರತಿನಿಧಿಸುವ ಪದಾರ್ಥಗಳು ಎಂಬುದಷ್ಟೇ ಅಭಿಪ್ರಾಯ. ಅಲ್ಲಿ ಕಲ್ಲಿದೆಯೇ, ಮಣ್ಣಿದೆಯೇ, ನೀರುಗಾಳಿಗಳಿವೆಯೇ ಎಂಬುದು ಮುಖ್ಯವಲ್ಲ. ಅದರ ಶೋಧನೆಯು ಇಲ್ಲಿ ಪ್ರಸ್ತುತವಲ್ಲ. ಪ್ರಧಾನಮಂತ್ರಿಗಳ ಆದೇಶವನ್ನು ಹೊತ್ತು ಒಬ್ಬ ನಮ್ಮಲ್ಲಿಗೆ ಬರುತ್ತಾನಾದರೆ ಪ್ರಧಾನಮಂತ್ರಿಗಳ ಆಶಯವೇನು ತಂದಿದ್ದಾನೆಂಬುದೇ ಮುಖ್ಯವೇ ವಿನಃ ಅವನ ದವಡೆಯಲ್ಲಿ ಹಲ್ಲೆಷ್ಟಿದೆ? ಅವನ ಬ್ಲಡ್‌ಗ್ರೂಪ್ ಏನೇ, ಬಿನೇ, ರಕ್ತದಲ್ಲಿ ಕೆಂಪು ರಕ್ತಕಣ, ಬಿಳಿ ರಕ್ತಕಣಗಳು ಯಾವ ಸಂಖ್ಯೆಯಲ್ಲಿವೆ – ಎಂಬುದೇ ಮೊದಲಾಗಿ ಉಳಿದ ವಿಷಯಗಳು ಪ್ರಧಾನವಾಗಿರುವುದಿಲ್ಲ. ಅಂತಹ ವಿಷಯಗಳನ್ನೇ ಚಿಂತಿಸ ಹೊರಟಾಗ ಅವುಗಳು ಪ್ರಧಾನವಾಗಬಹುದು. ಯಾವ ಉದ್ದೇಶ್ಯದಿಂದ ಚಿಂತನೆಗೆ ಹೊರಟಿದ್ದೇವೆಂಬುದರ ಮೇಲೆ ಯಾವುದು ಪ್ರಸ್ತುತ ಯಾವುದು ಅಪ್ರಸ್ತುತ ಎಂಬ ವಿಷಯವಿಭಾಗ. ಪ್ರಸ್ತುತದಲ್ಲಿ ಪುರುಷನ ಆಶಯವನ್ನು ಹೊತ್ತು ಪ್ರಕೃತಿಶಕ್ತಿಗಳು ಕಾರ್ಯಪ್ರವೃತ್ತವಾಗಿವೆಯೆಂಬ ಸತ್ಯವನ್ನು ಜ್ಞಾಪಿಸುವಂತೆ ಸೂರ್ಯನು ತೇಜೋರೂಪಿಯಾಗಿಯೂ ಉಳಿದ ಗ್ರಹನಕ್ಷತ್ರಗಳು ಅವನ ತೇಜಸ್ಸನ್ನು ಪ್ರತಿಬಿಂಬಿಸುವ ಅಂಬುರೂಪಿಯಾಗಿಯೂ ಇವೆಯೆಂಬ ಮಾತು ಬೆಳೆದಿದೆ.

ಚಂದ್ರನು ಮನಸ್ತತ್ವವನ್ನು ಪ್ರತಿನಿಧಿಸುತ್ತಾನೆ. ಮನಸ್ಸಿಗೆ ಸ್ವಭಾವತಃ ವೃದ್ಧಿ ಕ್ಷಯಗಳುಂಟು. ಅದು ಪರಮಾತ್ಮನೆಡೆಗೂ ಪಂಚಭೂತಮಯವಾದ ಪ್ರಕೃತಿ ಕ್ಷೇತ್ರದೆಡೆಗೂ ಸಂಚರಿಸುವ ಸ್ವಭಾವವುಳ್ಳದ್ದು. ಅದು ತಾನು ಪರಮಾತ್ಮನಿಂದ ಚೈತನ್ಯವನ್ನು ಪಡೆದು ದೇಹೇಂದ್ರಿಯಗಳನ್ನು ಸಂತರ್ಪಣ ಮಾಡಿಸಬಹುದು. ಅಥವಾ ಪರಮಾತ್ಮನತ್ತ ಅಭಿಮುಖವಾಗಿ ತಾನು ಪಡೆದ ಚೈತನ್ಯವನ್ನು ಅವನಲ್ಲೇ ಸಮರ್ಪಿಸಬಹುದು. ಚಂದ್ರನೂ ಸಹ ಉಚ್ಚತ್ವ ನೀಚತ್ವವನ್ನು ಹೊಂದುವುದುಂಟು. ಅಲ್ಲದೆ ಸೂರ್ಯಪ್ರಕಾಶವನ್ನು ಭೂಮಿಗೆ ಪೂರ್ಣವಾಗಿ ಪ್ರತಿಫಲಿಸುವುದುಂಟು. ಅಲ್ಲದೆ ಸೂರ್ಯಪ್ರಕಾಶವನ್ನು ಸೂರ್ಯನ ದಿಶೆಯಲ್ಲಿಯೇ ಪ್ರತಿಫಲಿಸುತ್ತಾ ಕ್ಷಯಗೊಳ್ಳುವುದೂ ಉಂಟು. ಮನಸ್ಸಿಗೆ ರಜಸ್ಸು–ತಮಸ್ಸುಗಳು ಆವರಿಸುವಂತೆ ಚಂದ್ರನಿಗೆ ಛಾಯೆಯು ಆವರಿಸಿ ಗ್ರಹಣವೆನ್ನಿಸಿಕೊಳ್ಳುವುದುಂಟು. ಇವೇ ಮೊದಲಾಗಿ ಹಲವು ಬಗೆಯ ಸಾಮ್ಯವಿರುವುದು ಚಂದ್ರನನ್ನು ಮನಸ್ತತ್ವದ ಪ್ರತಿನಿಧಿಯೆಂದು ಹೇಳುವುದರಲ್ಲಿ ಬಾಹ್ಯವಾದ ಕಾರಣಗಳಾಗಿವೆ.

ಆಧುನಿಕ ವಿಜ್ಞಾನಿಗಳು ಪ್ಲಾನೆಟ್ ಎಂದು ಗುರುತಿಸಿದ ಮಂಗಳ, ಬುಧ, ಗುರು, ಶುಕ್ರ, ಶನಿ ಎಂಬ ಐದು ಗೋಳಗಳನ್ನು ಭಾರತೀಯ ಭಾಷೆಯಲ್ಲಿ ಸೂಚಿಸಲು ಗ್ರಹವೆಂಬ ಪದವನ್ನು ಬಳಸಿಕೊಂಡಿರುವುದು ಅನೇಕ ತಪ್ಪು ತಿಳುವಳಿಕೆಗೆ ದಾರಿ ಮಾಡಿದೆ. ಭಾರತೀಯರು ಬಳಸಿರುವ ಗ್ರಹವೆಂಬ ಪದ ತುಂಬಾ ಪ್ರಾಚೀನ. ಮತ್ತು ಗ್ರಹವೆಂಬ ಬಗ್ಗೆ ಅವರ ಆಶಯವೇ ಬೇರೆಯಾಗಿದೆ. ಆಧುನಿಕ ವಿಜ್ಞಾನಿಗಳು ಪ್ಲಾನೆಟ್ ಎಂಬ ವಿಭಾಗವನ್ನು ರೂಪಿಸಿಕೊಳ್ಳುವಾಗ ಅವರ ನೋಟವೇ ಬೇರೆಯಾಗಿದೆ. ಹೀಗಿರುವುದರಿಂದ ಗ್ರಹ ಮತ್ತು ಪ್ಲಾನೆಟ್ ಶಬ್ದಗಳು ಸಮಾನಾರ್ಥಕಗಳಲ್ಲ. ಭಾಷಾಂತರಕಾರರು ತಪ್ಪಾಗಿ ಗ್ರಹಶಬ್ದವನ್ನು ಬಳಸಿದ್ದಾರೆ. ಭಾಷಾಂತರದಲ್ಲಿ ಘಟಿಸಿರುವ ಈ ಅಚಾತುರ್ಯವನ್ನು ಗಮನಿಸದೆ ಭಾರತೀಯರ ಜ್ಯೋತಿಷಶಾಸ್ತ್ರದ ಬಗೆಗೆ ಆಕ್ಷೇಪಣೆ ಮಾಡುವುದು ಸಂಪೂರ್ಣ ಅರ್ಥಹೀನವಾಗಿದೆ. ರಾಹು–ಕೇತುಗಳನ್ನು ಭಾರತೀಯರು ಛಾಯಾಗ್ರಹವೆಂದೇ ಹೆಸರಿಸಿದ್ದಾರೆ. ಸೂರ್ಯ, ಚಂದ್ರ, ಭೂಮಿಗಳು ಒಂದು ಸರಳ ರೇಖೆಯಲ್ಲಿ ಬಂದಾಗ ಉಂಟಾಗುವ ಗ್ರಹಣಗಳನ್ನು ರಾಹುಗ್ರಸ್ತ–ಕೇತುಗ್ರಸ್ತ ಎಂದು ಹೆಸರಿಸುವಾಗ ಛಾಯೆಯಿಂದಾಗುವ ವಿಶೇಷ ಪರಿಣಾಮವನ್ನು ಪರಿಗಣಿಸಿರುತ್ತಾರೆ.

ಭಾರತೀಯ ಜ್ಯೋತಿಷವು ಭೂಕೇಂದ್ರವನ್ನು ನಿರೂಪಿಸುತ್ತದೆ. ಆದರೆ ಇದು ಆಧುನಿಕ ವಿಜ್ಞಾನದ ದೃಷ್ಟಿಯಿಂದ ತೀರ ಅಸಂಗತ ಎಂದು ಭಾವಿಸುವವರಿದ್ದಾರೆ. ಈ ಬಗ್ಗೆ ಗಮನಿಸಬೇಕಾದ ವಿಚಾರಗಳಿವೆ. ಈ ಹಿಂದೆ ಹೇಳಿದಂತೆ ಒಂದು ನೇರದಲ್ಲಿ ಸೂರ್ಯನ ಕೇಂದ್ರಸ್ಥಿತಿಯನ್ನು ಭಾರತೀಯರು ಗುರುತಿಸದೇ ಇಲ್ಲ. ಆದರೆ ಖಗೋಳವನ್ನು ವೀಕ್ಷಿಸಿದಾಗ ಸ್ಥೂಲವಾಗಿ ಗೋಚರಿಸುವ ಸೂರ್ಯನ ಗತಿಯನ್ನು ಪರಿಗಣಿಸಿಕೊಂಡು ಭೂಮಿಯ ದೃಷ್ಟಿಯಿಂದ ಸೂರ್ಯನು ಯಾವ ಕೋನದಲ್ಲಿದ್ದಾನೆಂಬುದನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಜ್ಯೋತಿಶ್ಶಾಸ್ತ್ರದ ಸಿದ್ಧಾಂತಗಳನ್ನು ನಿರೂಪಿಸಲು ಅಗತ್ಯವಾಗಿರುವುದು ಅಷ್ಟೆ. ಭೂಮಿಯಲ್ಲಿರುವವನಿಗೆ ಸೂರ್ಯನು ಮೇಷ ವೃಷಭಾದಿಯಾಗಿ ಯಾವ ರಾಶಿಯಲ್ಲಿ ಗೋಚರಿಸುತ್ತಾನೆಂಬುದು ಜ್ಯೋತಿಶ್ಶಾಸ್ತ್ರದ ಪ್ರಮೇಯಗಳನ್ನು ನಿರೂಪಿಸಲು ಅಗತ್ಯವಾದದ್ದಾಗಿದೆ. ಸೂರ್ಯಕೇಂದ್ರವಾದವಾಗಲಿ

ಭೂಕೇಂದ್ರವಾದವಾಗಲಿ ಎರಡರಲ್ಲೂ ಈ ಲೆಕ್ಕಾಚಾರ ಒಂದೇ ಆಗಿದೆ.

ಕಾಲಧರ್ಮವನ್ನು ಗುರುತಿಸುವುದು ಹಾಗೂ ಗ್ರಹಗತಿಗಳ ಫಲವನ್ನು ಚಿಂತಿಸುವುದು ಜ್ಯೋತಿಶ್ಶಾಸ್ತ್ರದ ಗುರಿಯಾಗಿದೆ. ಆ ಗುರಿಗೆ ಬೇಕಾದಷ್ಟು ವಿಷಯಗಳನ್ನು ಮಾತ್ರವೇ ಈ ಶಾಸ್ತ್ರವು ಅವಲಂಬಿಸಬೇಕಾಗಿದೆ. ಅಲ್ಲದೆ ಭಾರತೀಯವಾದ ಎಲ್ಲ ಶಾಸ್ತ್ರಗಳಲ್ಲೂ ಏಕರೂಪವಾಗಿ ಕಂಡುಬರುವ ಸತ್ಯವೆಂದರೆ ಪರಮಾರ್ಥವನ್ನು ಅರಿಯುವ ಬಗ್ಗೆ ದಿಗ್ದರ್ಶನ ನೀಡುವುದಾಗಿದೆ. ಆರರಲ್ಲಿ ಮೂರು ಕಳೆದರೆ ಮೂರು ಉಳಿಯುವುದು ಎಂಬುದು ಗಣಿತಶಾಸ್ತ್ರದ ಒಂದು ಲೆಕ್ಕ. ಈ ಗಣಿತವನ್ನು ಅರ್ಥಮಾಡಿಸುವಾಗ ಸೌಲಭ್ಯಕ್ಕಾಗಿ ಅಧ್ಯಾಪಕನು ಮಗುವನ್ನು ನಿನ್ನಲ್ಲಿ ಆರು ಬಾಳೆಹಣ್ಣುಗಳಿವೆ. ಅವುಗಳಲ್ಲಿ ಮೂರನ್ನು ನನಗೆ ಕೊಟ್ಟರೆ ನಿನ್ನಲ್ಲಿ ಉಳಿಯುವುದೆಷ್ಟು? ಎಂದು ಪ್ರಶ್ನಿಸಿ 'ಮೂರು' ಎಂಬ ಉತ್ತರವನ್ನು ತರಿಸಲು ಯತ್ನಿಸಬಹುದು. ಇಲ್ಲಿ ಕಳೆಯುವ ಗಣಿತ ಕಲಿಸಿಕೊಡುವುದು ಪರಮಾರ್ಥವೇ ಹೊರತು ಅಧ್ಯಾಪಕರು ವಿದ್ಯಾರ್ಥಿಯಿಂದ ಬಾಳೆಹಣ್ಣು ಸಂಪಾದಿಸುವ ವಿಷಯವಲ್ಲ. ಆರು ಬಾಳೆಹಣ್ಣು ಇದ್ದಾಗ ಮೂರನ್ನು ಅಧ್ಯಾಪಕರಿಗೆ ಕೊಡಬೇಕು ಎಂದು ಶಾಸನ ಮಾಡುವ ವಿಷಯವಲ್ಲ. ಚಿಕ್ಕ ಮಗುವಿಗೆ ದೇವರ ಫೋಟೋ ತೋರಿಸಿ 'ದೇವರು! ಜೋತ ಮಾಡು' ಎಂದು ಹೇಳುವುದುಂಟು. ಕಾಗದದ ಮೇಲೆ ಬಣ್ಣದ ಮುದ್ರಣ ಮಾಡಿದ್ದಾರಲ್ಲ, ಅದೇ ದೇವರು ಎಂದು ಈ ಮಾತಿಗೆ ಅಭಿಪ್ರಾಯವಲ್ಲ. ಹೇಳುವವರಿಗೆ ಅದೇ ದೇವರು ಎಂಬ ಅಭಿಪ್ರಾಯವೂ ಇಲ್ಲ. ಸಾಮಾನ್ಯ ಬುದ್ಧಿಗೆ ಅರ್ಥವಾಗದ 'ದೇವರು' ಎಂಬ ಬಗ್ಗೆ ಶಿಶುವಿನ ಬುದ್ಧಿಯಲ್ಲಿ ಪಾರಮಾರ್ಥಿಕವಾದ ಸತ್ಯಕ್ಕೆ ವಿರೋಧವಿಲ್ಲದಂತೆ ಒಂದು ಪರಿಚಯವನ್ನು ನೀಡಬೇಕಾದರೆ ಹೀಗೆ ಹೇಳುವುದೇ ಅನಿವಾರ್ಯವಾದೀತು.

**'ಅಸತ್ಯೇ ವರ್ತ್ಮನಿ ಸ್ಥಿತ್ವಾ ತತಃ ಸತ್ಯಂ ಸಮೀಹತೇ** – ಅಸತ್ಯವಾದ ಮಾರ್ಗದಲ್ಲಿದ್ದು ಅದರಿಂದ ಸತ್ಯವನ್ನು ಸೇರಬಯಸುತ್ತಾರೆ' ಎಂದು ಹೇಳುವುದುಂಟು. ವಸ್ತುಸ್ಥಿತಿಯನ್ನು ಅರ್ಥಮಾಡಿಸುವಾಗ ಅನೇಕ ಮಾರ್ಗಗಳನ್ನು ಅವಲಂಬಿಸುವುದಿದೆ. ಆ ಮಾರ್ಗವೆಲ್ಲವೂ ವಾಸ್ತವಿಕವಾಗಿರಬೇಕೆಂಬ ನಿಯಮವಿಲ್ಲ. ಪರಮಾರ್ಥದಲ್ಲಿ ವಸ್ತುಸ್ಥಿತಿಯನ್ನು ಅರಿಯಲು ಸಹಕಾರಿಯಾಗಿದ್ದರೆ ಅದು ಮಾನ್ಯವಾಗಿರುತ್ತದೆ. ಇಂತಹ ವ್ಯವಹಾರವು ಪ್ರತಿವಿದ್ಯೆಯಲ್ಲೂ ತಾರತಮ್ಯೇನ ಇದ್ದೇ ಇರುತ್ತದೆ. ಹೀಗಿರುವುದರಿಂದ ಭೂಕೇಂದ್ರವಾದ ಜೌತಿಷದ ಪ್ರಧಾನ ವಿಚಾರದ ನಿರೂಪಣೆಗೆ ಸೋಪಾನವಾಗಿದ್ದು ವಿಚಾರದ ನಿರೂಪಣೆಗೆ ತೊಡಕನ್ನುಂಟುಮಾಡಿರುವುದಿಲ್ಲ. ಭೂಮಿಯಲ್ಲಿದ್ದವನಿಗೆ ಸೂರ್ಯ ಚಂದ್ರ ಮೊದಲಾದ ಒಂಭತ್ತು ಗ್ರಹಗಳು ಮೇಷಾದಿ ಯಾವರಾಶಿಯ ಅಂಶದಲ್ಲಿ ಕಲೆ, ವಿಕಲೆಗಳಲ್ಲಿ ಗೋಚರಿಸುತ್ತಾರೆಂಬುದಷ್ಟೇ ಪ್ರಧಾನವಾಗಿ ಅಗತ್ಯವಾಗಿರುವುದರಿಂದ ಈ ಲೆಕ್ಕಾಚಾರವನ್ನು ಭೂಕೇಂದ್ರವನ್ನು ಭಾವಿಸಿ, ನಿರೂಪಿಸಿಕೊಳ್ಳಲು ಅತ್ಯಂತ ಸುಲಭವಾಗಿರುವ ಆ ಕ್ರಮವನ್ನು ಅವಲಂಬಿಸುವುದು ಉಚಿತವೇ ಆಗಿದೆ. 'ಭೂಕೇಂದ್ರವಾದ' ಎಂಬಷ್ಟೇ ಕಾರಣಕ್ಕಾಗಿ ಶಾಸ್ತ್ರವನ್ನು ಅಪ್ರಾಮಾಣಿಕವೆಂದು ನಿರ್ಣಯಿಸಲಾಗುವುದಿಲ್ಲ.

ಛಾಯಾಗ್ರಹಗಳೆಂದು ಕರೆಯಲ್ಪಟ್ಟ ರಾಹುಕೇತುಗಳ ಬಗ್ಗೆ ಆಡುವ ಮಾತುಗಳು ಸತ್ಯಸಂಗತವಾದವುಗಳೇ. ಆಧುನಿಕ ವಿಜ್ಞಾನದ ಅವಲಂಬನೆಯನ್ನುಳ್ಳ ಬುದ್ಧಿಜೀವಿಗಳು ಈ ಬಗ್ಗೆ ಆಡುವ ಮಾತುಗಳುಂಟು – ಅವುಗಳೂ ಪರಿಶೀಲನಾರ್ಹಗಳೇ. ಆದರೆ ಎಲ್ಲ ಪರಿಶೀಲನೆಗಳು ನಾವು ಭಾವಿಸಿದಂತೆ ಬೌದ್ಧಿಕ ಯುಕ್ತಿಗಳಿಂದಲೇ ಸಮಗ್ರವಾಗಲಾರದೆಂಬುದನ್ನು ಮರೆಯುವಂತಿಲ್ಲ. ಪ್ರಕಾಶಕ್ಕೆ ಅಪಾರದರ್ಶಕವಾದ ಪದಾರ್ಥವು ಅಡ್ಡಲಾದಾಗ ಛಾಯೆಯೇರ್ಪಡುತ್ತದೆಯಷ್ಟೆ. ಸೂರ್ಯಪ್ರಕಾಶಕ್ಕೆ ಪರ್ವತವು ಅಡ್ಡವಾಗಬಹುದು. ಮೋಡವು ಅಡ್ಡವಾಗಬಹುದು. ಒಂದು ಕಟ್ಟಡವು ಅಡ್ಡಲಾಗಬಹುದು. ಒಂದು ಮರ, ಬಳ್ಳಿ, ಪ್ರಾಣಿ, ಮನುಷ್ಯ ಹೀಗೆ ಹಲವು ಅಡೆಗಳಿಂದ ನೆರಳು ಏರ್ಪಡಬಹುದು. ಈ ಹಲವು ಕಾರಣಗಳಿಂದ ಹುಟ್ಟುವ ನೆರಳು ಒಂದೇ ರೂಪವಾದದ್ದೇ? ಅದರ ಪರಿಣಾಮವು ಏಕರೂಪವೇ? ಹೊರದೃಷ್ಟಿಯಿಂದ ನೋಡಿದಾಗ ವ್ಯತ್ಯಾಸಗಳು ಕಂಡು ಬರದಿರಬಹುದು. ಆದರೆ ಉಂಟಾಗುವ ಪರಿಣಾಮಗಳು ಸಾಕಷ್ಟಿವೆ.

ಒಂದು ಮರದ ನೆರಳನ್ನೇ ಗಮನಿಸುವುದಾದರೆ ಆಲದ ಮರದ ನೆರಳು ಮನಸ್ಸಿನ ಕ್ಷೋಭೆಯನ್ನು ಇಳಿಸುತ್ತದೆ. ಶಾಂತತೆಯನ್ನು ವೃದ್ಧಿಗೊಳಿಸುತ್ತದೆ. ಏಕಾಂತವಾದ ಮನಸ್ಸಿನಿಂದ ಸಾಧನೆ ಮಾಡುವವನಿಗೆ ಪೋಷಣೆಯನ್ನು ನೀಡುತ್ತದೆ. ಈ ಪರಿಣಾಮವನ್ನು ಹುಣಿಸೇ ಅಥವಾ ಕಣಗಲು ಮರದ ನೆರಳಿನಲ್ಲಿ ಕಾಣಲಾಗದು. ಇದೇ ರೀತಿ ನೆಲ್ಲಿಯ ಮರದ ನೆರಳು, ಹಿಮಾಲಯದ ಪರಿಸರದಲ್ಲಿ ಬೆಳೆಯುವ ದೇವದಾರು ವೃಕ್ಷದ ನೆರಳು ಸಾವಧಾನತೆಗೆ ಸಹಕರಿಸುವಂತೆ ತಾರೆ ಹಾಗೂ ಈಚಲ ಮರದ ನೆರಳು ಸಹಕರಿಸುವುದಿಲ್ಲ. ಈ ರೀತಿಯಾದ ವಿಭಿನ್ನ ಪರಿಣಾಮಗಳಿಗೆ ಕಾರಣವೇನು? ಎಂಬುದು ಚಿಂತನೀಯವಾದ ವಿಷಯವಾಗಿದ್ದರೂ ಪರಿಣಾಮವಂತೂ ಹಲವು ಪ್ರಯೋಗಗಳಿಂದ ಮನವರಿಕೆಯಾಗುವುದುಂಟು. ಇದನ್ನು ಪರಿಶೀಲಿಸುವ ಮಾನದಂಡಗಳು ನಮ್ಮಲ್ಲಿರಬೇಕು. ಸಮಾಧಾನತೆಯನ್ನು ಅನುಭವದಲ್ಲಿ ಅರ್ಥಮಾಡಿಕೊಂಡ ಮನಸ್ಸೇ ಒಂದು ಮಾನದಂಡವಾಗಿ ಸತ್ಯವನ್ನು ಪ್ರಕಾಶಗೊಳಿಸಬಲ್ಲದು. ನಾಡೀ ಹಾಗೂ ಜ್ಯೋತಿಷದಂತಹ ಮಾಪನದಂಡಗಳೂ ಈ ಸತ್ಯವನ್ನು ಪ್ರಕಾಶಿಸಬಲ್ಲವು. ಈ ಮೂರು ಮಾನದಂಡಗಳು ಒಂದು ವಿಷಯದಲ್ಲಿ ಪ್ರಯುಕ್ತವಾಗಿ ಏಕರೂಪವಾದ ನಿರ್ಣಯಕ್ಕೆ ಎಡೆಗೊಡುವಂತಾದಾಗ ಈ ಎಲ್ಲ ಪ್ರಮಾಣಗಳೂ ಅಂಗೀಕಾರ್ಹವಾಗುವುದಲ್ಲದೇ ಈ ಪ್ರಮಾಣಗಳಿಂದ ಆದ ನಿರ್ಣಯವೂ ಸಹ ಒಪ್ಪಿಗೆಗೆ ಅರ್ಹವಾಗುತ್ತದೆ.

ನೆರಳಿನ ವಿಶಿಷ್ಟ ಪರಿಣಾಮಗಳನ್ನು ಕುರಿತು ಶ್ರೀರಂಗಮಹಾಗುರುಗಳು ತಮ್ಮ ಯೌವನದಲ್ಲಿ ನಡೆಸಿದ ಒಂದು ಪ್ರಯೋಗವನ್ನು ಅವರ ಸಮಕಾಲೀನರೊಬ್ಬರು ನಿರೂಪಿಸಿದ್ದನ್ನು ಈ ಪ್ರಸಂಗದಲ್ಲಿ ನೆನಪಿಸಿಕೊಳ್ಳುತ್ತೇನೆ. ಹೆಡತಲೆಯ ಲಕ್ಷ್ಮೀಕಾಂತದೇವಾಲಯದ ಅಂಗಣ. ನೆರಳಿನಲ್ಲೂ ಗುಣದೋಷಗಳು ಇರಬಹುದೇ? ಎಂಬ ಪ್ರಶ್ನೆ ಉದಯಿಸಿತ್ತು. 'ಹೌದಪ್ಪ, ಅದನ್ನು ಪ್ರಯೋಗಬದ್ಧವಾಗಿ ತೋರಿಸಬಹುದು. ನೀವು ಯಾವುದಾದರೂ ನಾಲ್ಕುವೃಕ್ಷಗಳ ರೆಂಬೆಯನ್ನು ತನ್ನಿ. ನಾನು ಕಣ್ಣಿಗೆ ಬಟ್ಟೆಕಟ್ಟಿಕೊಂಡು ಕುಳಿತುಕೊಳ್ಳುತ್ತೇನೆ. ನಾನು ಪಶ್ಚಿಮಾಭಿಮುಖವಾಗಿ ಕುಳಿತುಕೊಳ್ಳುತ್ತೇನೆ. ನನ್ನ ಬೆನ್ನು ಶಿರಸ್ಸಿನ ಮೇಲೆ ಆ ಕೊಂಬೆಯ ನೆರಳು ಬೀಳುವಂತೆ ಹಿಡಿದುಕೊಳ್ಳಿ. ಯಾವ ರೆಂಬೆ ಮೊದಲು, ಯಾವುದು ಅನಂತರ ಹಿಡಿದಿರೆಂಬುದನ್ನು ಬರೆದಿಟ್ಟುಕೊಳ್ಳಿ. ನಾನು ಅದರ ನೆರಳಿನ ಪರಿಣಾಮವನ್ನು ನನ್ನ ನಾಡಿಗಳಲ್ಲಾಗುವ ಬದಲಾವಣೆಯನ್ನು ಗಮನಿಸಿ ಬರೆದಿಡುತ್ತೇನೆ. ನಿಮ್ಮ ಮನಸ್ಸಿಗೆ ಒಪ್ಪಿಗೆಯಾಗುವ ವಿವರಣೆ ನನ್ನಿಂದ ಬಂದರೆ ನೀವು ಒಪ್ಪಿಕೊಳ್ಳಬಹುದು. ಇಲ್ಲವಾದರೆ ಇಲ್ಲ. ಒಪ್ಪಿಗೆಯಾಗದಿದ್ದರೆ ಒಪ್ಪಿಗೆಯಿಲ್ಲವೆಂದು ಹೇಳಲು ಸಂಕೋಚ, ದಾಕ್ಷಿಣ್ಯ ಪಡಬೇಕಾಗಿಲ್ಲ. ಇದು ಪ್ರಯೋಗಬದ್ಧವಾದ ವಿಷಯವಾದ್ದರಿಂದ ಇಲ್ಲಿ ಮನಸ್ಸಿಗೆ ಬಂದ ವಿಷಯವನ್ನು ಮರೆಮಾಡದಂತೆ ಮಾತನಾಡಬಹುದು. ಸಂಕೋಚಕ್ಕೆ ದಾಕ್ಷಿಣ್ಯಕ್ಕೆ ವಿಷಯ ಬೇರೆ.' ಎಂದು ತಿಳಿಸಿದರು.

ಸುಮಾರು ಮಧ್ಯಾಹ್ನ ಹನ್ನೊಂದು ಗಂಟೆಗೆ ಪ್ರಯೋಗಕ್ಕೆ ಸಿದ್ಧವಾಯಿತು. ಒಂದು ಹಲಸಿನ ಕೊಂಬೆ, ಮತ್ತೊಂದು ಹುಣಿಸೆಕೊಂಬೆ, ಇನ್ನೊಂದು ನೆಲ್ಲಿ, ಇನ್ನೊಂದು ಗೋಬಳಿ ನಾಲ್ಕು ಕೊಂಬೆಗಳನ್ನು ಸುಮಾರಿಗೆ ಸಮಾನ ಗಾತ್ರದಲ್ಲಿ ತಂದರು. ಅವರ ಬೆನ್ನ ಹಿಂದೆ ಮತ್ತು ಶಿರಸ್ಸಿಗೆ ನೆರಳು ಬೀಳುವಂತೆ ಒಂದರ ನಂತರ ಒಂದನ್ನು ಸುಮಾರು ಒಂದು ನಿಮಿಷಗಳ ಕಾಲ ಹಿಡಿದರು. ಒಂದರ ಬಗ್ಗೆ ಪರಿಣಾಮವನ್ನು ಗುರುತಿಸಿಕೊಂಡ ನಂತರ ಇನ್ನೊಂದು ಕೊಂಬೆ. ನಾಲ್ಕೇ ಕೊಂಬೆಗಳನ್ನು ಒಂದರ ಅನಂತರ ಒಂದರಂತೆ ಆರು ಪ್ರಯೋಗಗಳಲ್ಲಿ ಬಳಸಿ ಅದರ ಕ್ರಮವನ್ನು ಗುರುತು ಹಾಕಿದರು. ನಂತರ ಶ್ರೀರಂಗಮಹಾಗುರುಗಳು ತಾವು ಗುರುತು ಮಾಡಿದ ಪರಿಣಾಮಗಳನ್ನು ಓದಿದರು.

ಅದರಲ್ಲಿ ಗೋಬಳೀಮರದ ಕೊಂಬೆಯ ಬಗ್ಗೆ ಇದು ವಾತಪಿತ್ತಗಳನ್ನು ಉದ್ರೇಕಗೊಳಿಸುತ್ತದೆ, ನೆರಳು ಹಿತಕಾರಿಯಲ್ಲ ಎಂದು ವಿವರಿಸಿದರು. ಹಲಸಿನ ಕೊಂಬೆಯ ನೆರಳಿನ ಬಗ್ಗೆ ಇದು ಶ್ಲೇಷ್ಮವನ್ನು ಸ್ಫುಟಗೊಳಿಸುತ್ತದೆ, ಧಾತುಸಾಮ್ಯವನ್ನು ತರುತ್ತದೆ. ಧ್ಯಾನಕ್ಕೆ ಪೋಷಕವಾದ ನೆರಳು. ಹುಣಿಸೆಯ ಬಗ್ಗೆ ವಾತವನ್ನು ಕೆರಳಿಸುತ್ತದೆ, ಮನಸ್ಸಿನ ಸಮಾಧಾನ ಮರೆಯಾಗುತ್ತದೆ, ಇದು ಹಿತಕರವಲ್ಲ. ನೆಲ್ಲಿಯ ಕೊಂಬೆಯನ್ನು ಹಿಡಿದಾಗ ಪಿತ್ತವನ್ನು ಶಮನ ಮಾಡುತ್ತದೆ, ಧಾತುಸಾಮ್ಯವನ್ನು ಕೊಡುತ್ತದೆ, ಚಿತ್ತದ ಸಮಾಧಾನವನ್ನು ಹೆಚ್ಚಿಸುತ್ತದೆ, ಯಾವುದೋ ಶ್ರೇಷ್ಠಜಾತಿಯ ವೃಕ್ಷವೆಂದು ಹೀಗೆ ಪರಿಚಯ ನೀಡಿದ್ದಲ್ಲದೇ ನೆಲ್ಲಿ ಮತ್ತು ಹುಣಿಸೆಯ ಕೊಂಬೆಗಳನ್ನು ಎರಡನೇ ಬಾರಿ ಹಿಡಿದಾಗ ಈ ಬಗ್ಗೆ ಮೊದಲು ನೀಡಿದ ವಿವರಣೆಯನ್ನೇ ಪುನರಾವೃತ್ತಿಗೊಳಿಸಿದರು. ಪ್ರಯೋಗದ ಕೊನೆಯಲ್ಲಿ ಛಾಯೆಯನ್ನು 'ಸೂರ್ಯಪ್ರಿಯಾ' ಎಂದು ಕರೆಯುತ್ತಾರಷ್ಟೆ. ಸೂರ್ಯನು ತನ್ನ ಪ್ರಕಾಶದಿಂದ ಪದಾರ್ಥದ ಯಾವ ಧರ್ಮವನ್ನು ವೃದ್ಧಿಪಡಿಸುತ್ತಾನೋ ಛಾಯಾದೇವಿಯೂ ತಾನೂ ಅದೇ ಧರ್ಮವನ್ನು ಒಂದು ಮಟ್ಟದಲ್ಲಿ ವೃದ್ಧಿಪಡಿಸುತ್ತಾಳೆ. ದೇಶಕಾಲಗಳ ಭೇದದಿಂದ ಛಾಯೆಯ ಪರಿಣಾಮವು ವಿಚಿತ್ರವಾಗಿಯೂ ಆಗಬಹುದು. ಆದ್ದರಿಂದ ನೆರಳು ಆಯಾ ಪದಾರ್ಥದ ಧರ್ಮವನ್ನೇ ಒಂದು ಮಟ್ಟದಲ್ಲಿ ಬೆಳೆಸುತ್ತದೆ. ಇದರಿಂದ ವಿಚಿತ್ರವಾದ ಗುಣದೋಷಗಳು ಇನ್ನೊಂದು ವಸ್ತುವಿನಲ್ಲಿ ಏರ್ಪಡುವ ಸಂದರ್ಭವಿರುವುದರಿಂದ ಹಲವು ವಿಧಿನಿಷೇಧಗಳು ಬಂದಿವೆ. ಇದನ್ನು ನಾಡಿಯಿಂದಲೇ ತಿಳಿಯಬೇಕೆಂಬ ವಿಷಯವಲ್ಲ. ದೇಹೇಂದ್ರಿಯಮನಸ್ಸುಗಳು ಸ್ವಸ್ಥತೆಯಿಂದ ಕೂಡಿದ್ದರೆ ಹಾಗೆಯೇ ನಿರ್ಣಯಿಸಲೂಬಹುದು ಎಂದು ವಿವರಿಸಿದರು.

ಒಂದೊಂದು ಮರದ ನೆರಳೂ ತನ್ನ ತನ್ನ ಸ್ವಭಾವಾನುಗುಣವಾಗಿ ಭಿನ್ನ ಭಿನ್ನವಾದ ಪರಿಣಾಮವನ್ನು ಉಂಟುಮಾಡುವುದು. ಆದ್ದರಿಂದಲೇ ವಟ, ದೇವದಾರು, ನೆಲ್ಲಿ, ಬಿಲ್ವ, ಮೊದಲಾದವು ಅವರವರ ದೇಹಪ್ರಕೃತಿ, ಸಂಕಲ್ಪಗಳಿಗನುಸಾರವಾಗಿ ತಪಸ್ಸು, ಧ್ಯಾನ ಮೊದಲಾದ ಸಾಧನೆಗಳಿಗೆ ಪೋಷಣೆಯನ್ನು ನೀಡುತ್ತವೆಂಬ ನಿರ್ಣಯವಿದೆ. ಅವು ಸತ್ತ್ವಗುಣದ ಪ್ರಾಚುರ್ಯವನ್ನುಂಟುಮಾಡಿ ಸಾಧನೆಯನ್ನು ಶೀಘ್ರವಾಗಿ ಫಲಿಸುವಂತೆ ಮಾಡುತ್ತವೆ. ಅದಕ್ಕೆ ಪ್ರತಿಯಾಗಿ ತಾರೆ, ಈಚಲು ಮೊದಲಾದ ವೃಕ್ಷಗಳು ವಾತಪಿತ್ತವನ್ನು ಕ್ಷೋಭೆಗೊಳಿಸಿ ಸಾಧನೆಗೆ ಬೇಕಾದ ಸದ್ಧರ್ಮವನ್ನು ದೂರಮಾಡುತ್ತವೆ.

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**

**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

ಹಿಂದಿನ ಸಂಚಿಕೆಯಿಂದ

# ಸತ್ಯ ಪ್ರಕಾಶ

– ಡಾ. ಪಾವಗಡ ಪ್ರಕಾಶರಾವ್

**ಧ್ಯಾನ ಮಾಡುವುದಕ್ಕೆ ಗುರುಗಳ ಮಾರ್ಗದರ್ಶನದ ಅಗತ್ಯ ಇದೆಯೇ ?**

ಖಂಡಿತ ಇದೆ. ನೀರು ಗುಟುಕರಿಸುವುದರಿಂದ ಹಿಡಿದು ಕ್ರಮವಾಗಿ ಊಟ ಮಾಡುವುದನ್ನು ತಾಯಿ ಹೇಳಿಕೊಡುತ್ತಾಳೆ. ಬಟ್ಟೆ ಹೇಗೆ ಹಾಕಬೇಕೆಂಬುವುದನ್ನು ಕಲಿಸಿದ್ದಾರೆ. 'ಅ ಆ ಇ ಈ' ಇಂದ ಹಿಡಿದು ಪುಸ್ತಕಗಳನ್ನಭ್ಯಾಸ ಮಾಡುವ ತನಕ ಉಪಾಧ್ಯಾಯರು ದಾರಿ ತೋರಿದ್ದಾರೆ. ಗಣಿತವಿರಲಿ, ಸಾಹಿತ್ಯವಿರಲಿ, ತಂತ್ರಜ್ಞಾನವಿರಲಿ, ಸಮಾಜಶಾಸ್ತ್ರವಿರಲಿ, ವಿಜ್ಞಾನವಿರಲಿ, ಈ ಎಲ್ಲ ವಿದ್ಯೆಗಳನ್ನೂ ಕಲಿಯಲು ನಾವು ವರ್ಷ–ವರ್ಷಗಳು ಮಾರ್ಗದರ್ಶನಕ್ಕೆ ತುತ್ತಾಗುತ್ತೇವೆ. ಇಂತಹುದರಲ್ಲಿ, ಜೀವನದ ಎಲ್ಲ ವಿಷಯಗಳಲ್ಲೂ ನಾವು ಮಾರ್ಗದರ್ಶನ ತೆಗೆದುಕೊಳ್ಳುವಾಗ, ಧ್ಯಾನದ ವಿಷಯದಲ್ಲೇಕೆ ನಿಮಗೆ ಸಂಶಯ? ನಿಮಗೇನು ಹುಟ್ಟುತ್ತಿದ್ದಂತೆಯೆ ಧ್ಯಾನ ಸಹಜವಾಗಿ ಸ್ಫುರಿಸಿದೆಯೇನು? ಅಸಲು ಧ್ಯಾನವೆಂದರೇನೆಂದು ಗೊತ್ತೇ ನಿಮಗೆ? ಅಕಸ್ಮಾತ್ ಅ ಬಗ್ಗೆ ಏನೇ ಗೊತ್ತಿದ್ದರೂ ಅದೂ ವ್ಯಕ್ತಿ ಅಥವ ಪುಸ್ತಕಗಳ ಮಾರ್ಗದರ್ಶನದಿಂದಲೆ1 ಎಂದ ಮೇಲೆ ಸಂಕೋಚವೇಕೆ? ಅವಶ್ಯ ಮಾರ್ಗದರ್ಶನ ತೆಗೆದುಕೊಳ್ಳಿ ಅನುಭವಿಗಳಿಂದ.

**ರಾಮಾಯಣ ಪುರಾಣ ಕಥೆಯೇ ಅಥವ ಚರಿತ್ರೆಯೇ? ರಾಮಾಯಣದಲ್ಲಿ ಬರುವಂತೆ ಸಂಜೀವಿನೀ ಸಸ್ಯ ಇದೆಯೇ? ಅಥವಾ ಅದು ಕಾಲ್ಪನಿಕ ಕಥೆಯೇ?**

ಸಂಜೀವಿನೀ ವಿಷಯ ಒತ್ತಟ್ಟಿಗಿಟ್ಟರೆ, ರಾಮಾಯಣದ ಬಗ್ಗೆ ಮೂರು ನಿಲುವುಗಳನ್ನು ಹೇಳಿದ್ದೀರಿ. ಪುರಾಣ, ಚರಿತ್ರೆ ಮತ್ತು ಕಾಲ್ಪನಿಕ ಕಥೆ. ಶ್ರೀಮದ್ ರಾಮಾಯಣ ಈ ಮೂರೂ ಅಲ್ಲ. ಇವೆಲ್ಲವನ್ನೂ ಮೀರಿದ್ದು. ಅದು ಕಾವ್ಯ; ಮಹಾಕಾವ್ಯ; ಪ್ರಾಚೀನ ಕಾವ್ಯ. ಆದಿ ಕಾವ್ಯ; ಅಗ್ರ ಕಾವ್ಯ; ಮಹೋತ್ತಮ ಕಾವ್ಯ.

ಪುರಾಣದಂತೆ ಆಧಾರವಿಲ್ಲದ, ಕ್ರಮವಿಲ್ಲದ, ಏನೇನೋ ಎಲ್ಲೆಲ್ಲೋ ಹೇಗೆ ಹೇಗೋ ಎಳೆದೆಳೆದು ಹೇಳುವ ಪದ್ಯ ರೂಪದ ಸಮೂಹ ಅಲ್ಲ. ಚರಿತ್ರೆಯಂತೆ ಕಲದ ಪ್ರತಿ ಘಟನೆಯನ್ನೂ ಬರಡು ಬರಡಾಗಿ ಬರೆಯುವ ಚಾರಿತ್ರಿಕ ಘಟನೆಗಳ ಕೈಪಿಡಿಯೂ ಅಲ್ಲ. ಶ್ರೀಮದ್ ರಾಮಾಯಣದಲ್ಲಿರುವ ಪ್ರತಿ ಅಕ್ಷರವೂ ಪರಮರಹಸ್ಯವೆಂದು ಪ್ರಮಾಣ ಮಾಡಲಾಗದಿದ್ದರೂ, ಅದರಲ್ಲಿರುವುದೆಲ್ಲ ಕಲ್ಪನೆಯೆಂದು ಹೇಳುವ ಹುಂಬತನವನ್ನೂ ನಾನು ಮಾಡುವುದಿಲ್ಲ. ಸತ್ಯವಸ್ತುವನ್ನಾಧರಿಸಿ ಕಾವ್ಯಾಲಂಕಾರಗಳಿಂದ ಶೃಂಗರಿಸಿದ ಕಾವ್ಯ ಅದು. ಅದು ಬೇಂದ್ರೆಯವರ ಬಾಯಲ್ಲಿ 'ಓಂಕಾರದ ಶಂಖನಾದಕಿಂತ ಕಿಂಚಿದೂನ' ಅಷ್ಟೇ. ಎಂದರೆ ವೇದಾಂತದ ಪರಮ ಸತ್ಯ ಪ್ರಣವವಾದರೆ, ಕಾವ್ಯ ಅದನ್ನು ಅಲಂಕಾರಿಕವಾಗಿ ಉತ್ಪ್ರೇಕ್ಷೆ ಸಹಿತ, ಹಾಡಿನಲ್ಲಿ ಹೇಳುವ ಮೃದು ಮಧುರ ವರ್ಣ ವಿನ್ಯಾಸ.

ಸಂಜೀವಿನಿ ಸಸ್ಯ ಉಂಟೇ? ಇರಬಹುದು/ಇರದಿರಬಹುದು! ಸಸ್ಯಶಾಸ್ತ್ರಿಯನ್ನು ಕೇಳಿದರೆ ನಮಗೆ ಗೊತ್ತಾಗದ ಸಾವಿರ ಸಾವಿರ ಸಸ್ಯದ ಹೆಸರುಗಳನ್ನೇ ಹೇಳುತ್ತಾರೆ. ಅವುಗಳ ಸಂಸಾರಗಳನ್ನು ವಿಂಗಡಿಸುತ್ತಾರೆ. ಸ್ಥಳೀಯ ನಾಮಗಳೊಡನೆ ವೈಜ್ಞಾನಿಕವಾದ ನಾಮಗಳನ್ನು ಹೇಳುತ್ತಾರೆ. ನಮಗಿವೆಲ್ಲಾ ಗೊತ್ತೇ? ಸಾವಿರಾರು ವರ್ಷಗಳ ಹಿಂದಿನ ಆ ಸಸ್ಯ, ಇಂದಿನವರ ಕಣ್ಣಿಗೆ ಬಿದ್ದಿದೆಯೋ ಇಲ್ಲವೋ ಹೇಗೆ ಹೇಳೋಣ? ಅಂದಿನ ಕಲದಲ್ಲಿ ಅದರ ಉಪಯೋಗ ಇತ್ತೆಂದು ನಂಬುವುದರಿಂದ ಕಾವ್ಯಾನಂದ ಉಂಟಾಗುತ್ತದೆ. ಸಧ್ಯಕ್ಕೆ ಅದನ್ನು ಅನುಭವಿಸುವ ಹೆಚ್ಚು ಆಸಕ್ತಿ ಇದ್ದರೆ ಕೇವಲ ಸಂಜೀವನು ಏಕೆ ? ವಿಶಲ್ಯಕರಣಿ, ಸವರ್ಣ ಕರಣಿ, ಸಂಧಾನ ಕರಣಿಗಳ ಬಗ್ಗೆಯೂ ಸಂಶೋಧನ ನಡೆಸಿ ನಮಗೆಲ್ಲ ತಿಳಿಸಿ.

**ಧರ್ಮ ಜಿಜ್ಞಾಸೆ ಎಂದರೇನು? ಜಿಜ್ಞಾಸೆ ಮನುಷ್ಯನಿಗೆ ಒಳ್ಳೆಯದೆ ಅಥವಾ ಅಲ್ಲವೇ?**

ಎರಡನೆಯ ಪ್ರಶ್ನೆಗೆ ಮೊದಲು ಉತ್ತರ ಹೇಳಿಬಿಡುವ. ಜಿಜ್ಞಾಸೆ ಎಂಬುದನ್ನು ಅತ್ಯಂತ ಸರಳವಾಗಿ ಹೇಳಬೇಕೆಂದರೆ, ಚಿಂತನೆ ಎಂದರೆ ಯೋಚಿಸುವುದು, ಯೋಚಿಸುವುದು ಎನ್ನುವುದು ಅತ್ಯಂತ ಸಾಧಾರಣ ಪದ. ಸಾಮಾನ್ಯವಾಗಿ ವ್ಯಕ್ತಿಗತವಾದ, ಸಂಸಾರಗಳಿಗೆ ಸಂಬಂಧ ಪಟ್ಟದ್ದು ಯೋಚನೆ. ಸಮಾಜಕ್ಕೆ ಸಮಾಜದ ಹಿತಕ್ಕೆ ಸಂಬಂಧಿಸಿದ್ದು ಚಿಂತನೆ. ಮನೆಯ ಖರ್ಚಿಗೆ ಸಂಪಾದಿಸುವ ಹಣಕ್ಕೆ ಏನು ಮಾಡಬೇಕು ಎಂದು ಯೋಚಿಸುವುದಕ್ಕೂ, ದೇಶದ ಆರ್ಥಿಕ ಸ್ಥಿತಿಯ ಬಗ್ಗೆ ಆಲೋಚಿಸುವುದಕ್ಕೂ ವ್ಯತ್ಯಾಸವಿಲ್ಲವೇ? ಎರಡನೆಯದು ಘನವಾದ ಚಿಂತನೆ. ಮನುಷ್ಯ ಇಂತಹ ಚಿಂತನೆಗಳನ್ನು ಮಾಡಿದ್ದರಿಂದಲೇ ನಡೆಯುತ್ತಿದ್ದವ ಇಂದು ವಿಮಾನದಲ್ಲಿ ಹಾರಲು ಸಾಧ್ಯವಾಯಿತು! ಊಟಕ್ಕಾಗಿ ಬೇಟೆ ಮಾಡುತ್ತಿದ್ದವನು ಭತ್ತದಲ್ಲಿ ಅನ್ನವನ್ನು ಕಂಡ. ಹಣ್ಣಿನಲ್ಲಿಯೂ ಊಟ ಕಂಡ! ಎಲೆಗಳಿಂದಲೋ, ಸತ್ತ ಪ್ರಾಣಿಯ ತೊಗಲಿನಿಂದಲೋ ಮಾನ ಮುಚ್ಚಿಕೊಳ್ಳುತ್ತಿದ್ದವನು ಇಂದು ವೈವಿಧ್ಯದ ಉಡುಗೆ–ತೊಡುಗೆಗಳನ್ನು ತೊಟ್ಟ! ಮರದ ಪೊಟರೆಯಲ್ಲೋ, ಗುಹೆಗಳಲ್ಲೋ ಬದುಕುತ್ತಿದ್ದವನು ಸೊಗಸಾದ ಭವನಗಳನ್ನು ಕಟ್ಟಿಸಿಕೊಂಡ! ಪಾಳೆಗಾರರ ಪುಟ್ಟ–ಪುಟ್ಟ ಗುಂಪುಗಳಲ್ಲಿ ನಿತ್ಯ ಕದನಗಳಿಗೆ ಸಿದ್ಧನಾಗುತ್ತಿದ್ದವನು, ಇಂದು ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡ. ಹೀಗೆ ನೂರು ಬದಲಾವಣೆಗಳನ್ನು ವಿವರಿಸಬಹುದು. ಇವೆಲ್ಲ ಚಿಂತಕರ ಚಿಂತನೆಯ ಫಲ. ಮಳೆ ಬಂದು ಅಪವ್ಯಯವಾಗುತ್ತಿದ್ದು, ಹರಿದು ಹೋಗುತ್ತಿದ್ದ ನೀರಿಗೆ ಕೆರೆ– ಕಟ್ಟಿ ಅದರಲ್ಲಿ ತಾವರೆ ಬೆಳೆಸಿದ್ದೂ ಈ ಚಿಂತನೆಯ ಫಲವೇ. ಈಗ ಹೇಳಿ ಜಿಜ್ಞಾಸೆ ಮನುಷ್ಯನಿಗೆ ಒಳ್ಳೆಯದೇ ಅಥವಾ ಅಲ್ಲವೇ? ಇನ್ನು ಧರ್ಮ ಜಿಜ್ಞಾಸೆ. ಇದು ಶಾಸ್ತ್ರೀಯ ವಿಷಯ. ಅರ್ಥವಾಗುವುದು ಸ್ವಲ್ಪ ಕಷ್ಟ. ಆದರೂ ಪ್ರಯತ್ನಪಡುತ್ತೇನೆ. ವೇದ ಎಂದು ನಾವು ಹೇಳುವುದರಲ್ಲಿ ನಾಲ್ಕು ವಿಭಾಗಗಳಿವೆ. ಸಂಹಿತೆ, ಬ್ರಾಹ್ಮಣ, ಆರಣ್ಯ, ಉಪನಿಷತ್. ಈ ನಾಲ್ಕರಲ್ಲಿ ನಾವು ಅಪೌರುಷೇಯವೆಂದು ಯಾವುದನ್ನು ಕರೆಯುತ್ತೇವೋ, ಅದು ಕೇವಲ ಸಂಹಿತೆ ಮಾತ್ರ. ಸಂಹಿತೆ ಬಿಟ್ಟು ಉಳಿದ ಮೂರರಲ್ಲಿ ಮೊದಲನೆಯದೆ 'ಬ್ರಾಹ್ಮಣ' ಅದರ ತುಂಬ ಇರುವುದೆ ಧರ್ಮ ಜಿಜ್ಞಾಸೆ. ಇಲ್ಲಿ 'ಧರ್ಮ ಎಂದರೆ 'ಕರ್ಮ' ಎಂದರ್ಥ. ಇಲ್ಲಿ ಕರ್ಮ ಎಂದರೆ ಯಜ್ಞ ಮಾಡುವುದು. ಧರ್ಮ ಎಂದರೆ ಯಜ್ಞ ಮಾಡುವುದು ಹೀಗೆ ಯಜ್ಞ ಮಾಡುವುದರಲ್ಲಿ ಮೂರು ವಿಧ. ಒಂದು ನಿತ್ಯ. ಎರಡು ನೈಮಿತ್ತಿಕ, ಮೂರು ಕಾಮ್ಯ. ನಿತ್ಯಕರ್ಮವೆ ನಿತ್ಯ ಧರ್ಮ. ಇದರಿಂದ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲ. ಯಾವುದಾದರೂ ಕಾರಣದಿಂದ ವಿಶೇಷ ದಿನಗಳಲ್ಲಿ ಮಾಡುವ ವಿಶೇಷ ಕರ್ಮ ಅಥವ ಯಾಗ, ಇದು ನೈಮಿತ್ತಿಕ. ಮೂರನೆಯದು ಏನನ್ನಾದರೂ ಬಯಸಿ, ಆಸೆ ತೀರಿಸಿಕೊಳ್ಳಲು ಮಾಡುವ ಯಜ್ಞ, ಉದಾಹರಣೆಗೆ 'ಪುತ್ರ ಕಾಮೇಷ್ಟಿ', 'ಶಾರದಾ ವ್ರತ', ' ಸತ್ಯನಾರಯಣ ವ್ರತ', ಮೊದಲನೆಯದು ಅನಿವಾರ್ಯ, ಎರಡನೆಯದು ಅವಶ್ಯಕ, ಮೂರನೆಯದು ಐಚ್ಛಿಕ. ಈ ಧರ್ಮಜಿಜ್ಞಾಸೆಗೆ ಸಂಬಂಧಪಟ್ಟ ಪ್ರಥಮ ಕೃತಿ ಜೈಮಿನ್ಯಾಚಾರ್ಯರ 'ಮೀಮಾಂಸಾ ಸೂತ್ರ'. ಈ ದಾರಿಯಲ್ಲಿ ಬಂದವರೇ ಕುಮಾರಿಲ ಭಟ್ಟರು. ಅವರ ಶಿಷ್ಯರೇ ಮಂಡನಮಿಶ್ರರು. ಅವರನ್ನು ತಮ್ಮ ವಾದದಲ್ಲಿ ಮಣಿಸಿದ್ದು ಶ್ರೀ ಶ್ರೀ ಶ್ರೀ ಶಂಕರಾಚಾರ್ಯರು. ಈ ಮಂಡನಮಿಶ್ರರು ಸುರೇಶ್ವರಾಚಾರ್ಯರಾಗಿ ನಮ್ಮ ಶೃಂಗೇರಿ ಶಾರದಾ ಪೀಠದ ಪ್ರಥಮಾಧ್ಯಕ್ಷರಾದದ್ದು – ಇಷ್ಟು ಸಾಕೋ ಧರ್ಮದ ಜಿಜ್ಞಾಸೆ?

श्री आदिशङ्कराचार्य शारदा लक्ष्मीनृसिंह पीठम्, श्री मठम् – हरिहरपुरम्

SRI ADISHANKARACHARYA SHARADA LAKSHMI NARASIMHA PEETAM

ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್

# ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ



## ಚಾತುರ್ಮಾಸ್ಯ ಮಹೋತ್ಸವ ಆಹ್ವಾನ ಪತ್ರಿಕಾ

**03-07-2023 ರಿಂದ 29-09-2023**

ಸ್ಥಳ: ಹಿಂದೂ ಸಾದರ ಸಮುದಾಯ ಭವನ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು

ವ್ಯಾಸಪೂಜಾ/ಚಾತುರ್ಮಾಸ್ಯ ವ್ರತ ಸಂಕಲ್ಪ : ಜುಲೈ 03, 2023

ಉತ್ತರ ಪೂಜಾ ವ್ಯಾಸಾಕ್ಷತೆ : ಜುಲೈ 04, 2023

ಚಾತುರ್ಮಾಸ್ಯ ವ್ರತ ಸಮಾಪ್ತಿ : ಸೆಪ್ಟೆಂಬರ್ 29, 2023

ಆತ್ಮೀಯರೇ,

ಪವಿತ್ರ ತುಂಗಾ ನದಿಯ ತೀರದಲ್ಲಿರುವ ದಿವ್ಯಕ್ಷೇತ್ರ ಹರಿಹರಪುರವು ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಮತ್ತು ಆದಿಶಂಕರ ಭಗವತ್ಪಾದರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾ ಪರಮೇಶ್ವರೀ ದೇವಿಯ ಪೂರ್ಣ ಸಾನ್ನಿಧ್ಯವನ್ನು ಹೊಂದಿದ್ದು, ಇಲ್ಲಿಯ ಧರ್ಮಪೀಠವು ಸಾವಿರಾರು ವರ್ಷಗಳ ಭವ್ಯವಾದ ಇತಿಹಾಸ ಹಾಗೂ ಶ್ರೇಷ್ಠವಾದ ಗುರು ಪರಂಪರೆಯನ್ನು ಹೊಂದಿರುತ್ತದೆ.

ಇಂತಹ ಧರ್ಮಪೀಠದ ಪ್ರಸ್ತುತ ಪೀಠಾಧಿಪತಿಗಳಾಗಿರುವ ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು, ಅನಾದಿಕಾಲದಿಂದಲೂ ಪರಂಪರಾಗತವಾಗಿ ಬಂದಿರುವ ಅನುಷ್ಠಾನ, ಪೂಜೆ, ಸೇವಾ ಕೈಂಕರ್ಯಾದಿಗಳನ್ನು ಪರಮ ಶ್ರದ್ಧಾಭಕ್ತಿಯಿಂದ ನಡೆಸಿಕೊಂಡು ಬರುತ್ತಿರುವುದರ ಜೊತೆಗೆ, ನಮ್ಮ ಸನಾತನ ಹಿಂದೂ ಧರ್ಮದ ಸಂಘಟನೆ ಮತ್ತು ಸಂರಕ್ಷಣೆಗಾಗಿ ಅತ್ಯಂತ ಯೋಜನಾಬದ್ಧವಾಗಿ ಸಂಪೂರ್ಣ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಾ, ಯಾವುದೇ ಭೇದ ಭಾವವಿಲ್ಲದೇ ಸಮಸ್ತ ಹಿಂದೂ ಸಮಾಜಕ್ಕೂ ದಿವ್ಯ ಮಾರ್ಗದರ್ಶನವನ್ನು ಮಾಡುತ್ತಿರುವುದು, ನಮಗೆಲ್ಲರಿಗೂ ತಿಳಿದ ವಿಚಾರವೇ.

ಹೀಗೆ ಜ್ಞಾನನಿಷ್ಠರು, ಪರಮ ತಪಸ್ವಿಗಳೂ ಆಗಿರುವ ಪರಮಪೂಜ್ಯ ಮಹಾಸ್ವಾಮಿಗಳವರು, ಇದೇ ಶೋಭಕೃತ್ ವರ್ಷದ ಚಾತುರ್ಮಾಸ್ಯ ವ್ರತವನ್ನು ಬೆಂಗಳೂರು ಮಹಾನಗರದ ಭಕ್ತಕೋಟಿಯ ಕೋರಿಕೆಯ ಮೇರೆಗೆ, ಮಹಾಲಕ್ಷ್ಮೀ ಲೇಔಟ್‌ನ 'ಹಿಂದೂ ಸಾದರ ಸಮುದಾಯ ಭವನ'ದಲ್ಲಿ ಆಚರಿಸಲು ಒಪ್ಪಿ ಅನುಗ್ರಹಿಸಿರುತ್ತಾರೆ. ಭಕ್ತಜನರ ಹಿತಕ್ಕಾಗಿ ಮತ್ತು ಲೋಕಕಲ್ಯಾಣಕ್ಕಾಗಿ ಪರಮಹಂಸಯತಿಗಳು ನಡೆಸುವ ಚಾತುರ್ಮಾಸ್ಯ ವ್ರತವು ನಮ್ಮ ಬೆಂಗಳೂರಿನಲ್ಲಿ ನಡೆಯುವುದು ನಮ್ಮೆಲ್ಲರ ಭಾಗ್ಯ ವಿಶೇಷವೇ ಆಗಿದೆ. ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಒಂದು ಐತಿಹಾಸಿಕ ಕಾರ್ಯಕ್ರಮವಾಗಿ, ಸಂಭ್ರಮ ಸಡಗರದಿಂದ ನಡೆಸಲು ತಮ್ಮೆಲ್ಲರ ಸಹಕಾರವನ್ನು ಅಪೇಕ್ಷಿಸುತ್ತೇವೆ. ಚಾತುರ್ಮಾಸ್ಯ ಸಂದರ್ಭದಲ್ಲಿ ಯತಿಗಳ ಸೇವೆಯನ್ನು ಮಾಡುವುದು ಗೃಹಸ್ಥರ ಕರ್ತವ್ಯ ಹಾಗೂ ಪರಮಭಾಗ್ಯವಾಗಿರುತ್ತದೆ.

ಆದ್ದರಿಂದ ತಾವುಗಳು ಪರಮ ಪುಣ್ಯಕರವಾದ ಈ 'ಚಾತುರ್ಮಾಸ್ಯ ಮಹೋತ್ಸವದಲ್ಲಿ' ಸಕ್ರಿಯವಾಗಿ ತೊಡಗಿಸಿಕೊಂಡು, ಚಾತುರ್ಮಾಸ್ಯ ಸೇವಾ ಸಮಿತಿಗೆ ಎಲ್ಲ ರೀತಿಯ ಸಹಕಾರವನ್ನು ನೀಡಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ, ಶ್ರೀ ಶಾರದಾ ಲಕ್ಷ್ಮೀನರಸಿಂಹ ಸ್ವಾಮಿಯ ಕೃಪೆಗೆ ಹಾಗೂ ಪರಮಪೂಜ್ಯ ಮಹಾಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.


ಡಾ|| ಬಿ.ಎಸ್. ರಾಘವೇಂದ್ರ ಭಟ್
ಪ್ರಧಾನ ಸಂಚಾಲಕರು
ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ

ಶ್ರೀಯುತ ಕೆ. ಗೋಪಾಲಯ್ಯ
ಗೌರವಾಧ್ಯಕ್ಷರು, ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ
ಮಾನ್ಯ ಶಾಸಕರು ಹಾಗೂ ಮಾಜಿ ಸಚಿವರು, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು

ಡಾ|| ಬಿ.ಎಸ್. ರವಿಶಂಕರ್
ಆಡಳಿತಾಧಿಕಾರಿಗಳು
ಶ್ರೀಮಠ, ಹರಿಹರಪುರ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9741025098, 9448374458, 9845578992, 9449032007


**BANK DETAILS**

Name : **SREEMATH HARIHARAPURA**

Bank : KARNATAKA BANK, HARIHARAPURA

A/c No : 3222500100732301

IFSC : KARB0000322

Cheques/DD favouring of **SREEMATH, HARIHARAPURA**

LOCATION


SREEMATH, Hariharapura - 577 120,
Koppa Taluk, Chikmagalur Dist, Karnataka.

Bhaktimandiram, No.1370/M, Nehru Road
Girinagar, Bangalore - 560 085

E-mail: hhpchaturmasya23@gmail.com • Website: www.hariharapura.in • /hariharapurmath

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 24-06-2023 Date of Publishing 22-06-2023

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar